Licence No. 60.
licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೦ | ತಾರೀಕು ೨೧-೧೨-೧೯೫೧ನೇ ಶುಕ್ರವಾರ | ಸಂಚಿಕೆ ೨೮

॥ ಓಟಿನ ಓಡಾಟ ॥

[ಬರೆದು ಬಂದದ್ದು]

ಉನೇಬುವಾರರ ನೇಮಕ ಪತ್ರಗ
ಪರಿಶೀಲನೆಯು ಮುಗಿದ ವೇಳೆ ಓಟಿ
ಓಡಾಟವು ನಮ್ಮ ದೇಶದಲ್ಲಿ ಬಹು ಬಿ
ನಿಂದ ಮುಂದುವರಿಯುತ್ತಿದೆ. ಹಿಂ
ದೇಶದ ಇತರ ಭಾಗಗಳಲ್ಲಿ, ಅನೇಕ
ರ್ಟಿಗಳು ಉದ್ಭವಿಸಿ, ಒಂದು ಇನ್ನೊಂ
ಪಾರ್ಟಿಯ ತತ್ವಗಳನ್ನೂ ಮುಂದಿನ
ಜನೆಗಳನ್ನೂ ಹೆಳಿಯುತ್ತಾ 'ತಾವು
ಶೀಲರಾಗಿ ಬಂದರೆ, ದೇಶಕ್ಕೆ ಯೂ
ಯಾವ ಕಲ್ಯಾಣಗಳನ್ನು ತರಲು ಪ್ರ
ುತ್ನಿಸುತ್ತೇವೆ" ಎಂದು ಮೊದಲಾಗಿ
ೇಳುತ್ತಿದ್ದಾರೆ. ಕಾಂಗ್ರೆಸ್ ಪಾರ್ಟಿ
ಯಾವುದೂ ಕಾಂಗ್ರೆಸ್ಸನ್ನು ಬಿಟ್ಟರೆ,
ಲೆ ಇರುವ ಪಾರ್ಟಿಗಳು ಮೊನ್ನೆ ತಾನೆ
ಹುಟ್ಟಿದ ಪಾರ್ಟಿಗಳು. ಅವರ ತತ್ವದ
ಯೂ ಯೋಜನೆಗಳಲ್ಲಿ ಸಂಸಮಾನತ್ವ
ಲ್ಲ ಹಿದ್ದೊಬ್ಬರದೂ ಒಂದೊಂದಕ್ಕೆ
ರೋಧವಾಗಿದೆ. ಅದುದರಿಂದ ಇಂ
ಒಂದೂ ಭದ್ರವಾದ ಸರಕಾರವನ್ನು
ುಪಿಸಿ, ಭಾರತದ ವ್ಯಕ್ತಿತ್ವವನ್ನು ಉಳಿ
ಸಂತ ಯೋಜನೆಯನ್ನು ಕೈಕೊಳ್ಳಲು
ಸವಾದ ಶಕ್ತಿ ಇರುವ ಒಂದು ಪಾರ್ಟಿ
ಂದರೆ ಅದು ಕಾಂಗ್ರೆಸು. ಆದ್ದರಿಂ
'ಕಾಂಗ್ರೆಸಿಗೆ ಬೆಂಬಲ ಕೊಡಿ' ಎಂದು
ೇಳುತ್ತಿದ್ದಾರೆ.

ನಮ್ಮ ದೇಶದಲ್ಲಿ ಇಂತಹ ನಾನಾ
ರದ ಪಾರ್ಟಿಗಳೆಲ್ಲ ಇರುವುದು ಒಂದೇ
ಾರ್ಟಿ. ಆದರೆ ಅದರಲ್ಲಿ ಕೊಡಗಿನ ಭ
ಷ್ಯದ ಪ್ರಶ್ನೆಯ ಮೇಲೆ ಒಡಕು ಬಂ
ು ಈಗ ಕಾಂಗ್ರೆಸಿನೊಳಗೇ ಎರಡು ಪಾ
ರ್ಟಿಯಾಗಿರುವುದಲ್ಲದೆ, ಕಾಂಗ್ರೆಸಿನ ಯೋ
ನೆಗಳಿಗೆ ವಿರೋಧವಾದ ಪಾರ್ಟಿ ಕೊಡ
ನಲ್ಲಿಲ್ಲವೆಂದೇ ಹೇಳಬಹುದು. ಕಮ್ಯು
ಸ್ಟ್ ಪಾರ್ಟಿಯ ಹೊರ ಒಂದೆರಡು ಉ
ೇದುವಾರರು ನಿಂತಿರುವರಾದರೂ, ಈ
ಮುಖ್ಯವಾಗಿ ಕಂಡುಬರುವ ಎರಡು
ಾರ್ಟಿ ಎಂದರೆ, ಶ್ರೀ ಪಿ. ಐ ಬೆಳ್ಯಪ್ಪನ
ರ ಪಾರ್ಟಿ ಮತ್ತು ಕೆ. ಪಿ. ಸಿ. ಸಿ. ಯ
ರು ಕಾಂಗ್ರೆಸ್ ಪರವಾಗಿ ನಿಲ್ಲಿಸಿದವರೆಂ
ಹೇಳುವ ಪಾರ್ಟಿ. ಈ ಎರಡು ಪಾ
ಗಳಲ್ಲಿ ಅಖಿಲ ಕಾಂಗ್ರೆಸ್ ಪಾರ್ಟಿಯ
ತ್ವಗಳ ಕುರಿತು ಯಾವುದೊಂದೂ ವ್ಯ
ತ್ಯಾಸವಿಲ್ಲ. ಆದರೆ ಕೊಡಗಿನ ಭವಿಷ್ಯದ
ರ್ಣಯದಲ್ಲಿ ವಿಶಿಷ್ಟ ಮಹತ್ವರವಾದ
ವ್ಯತ್ಯಾಸವಿದೆ ಎಂಬುದು ಎಲ್ಲರಿಗೂ ತಿಳಿ
ದ ಸಂಗತಿಯಾಗಿದೆ. ಕೊಡಗನ್ನು ಪ್ರ
ತ್ಯೇಕ ಸಂಸ್ಥಾನವಾಗಿಟ್ಟುಕೊಂಡು ಇಲ್ಲಿ
ಮಹಾತ್ಮಾ ಗಾಂಧಿಯವರ ಮನಸ್ಸಿನಲ್ಲಿ
ದ್ದ 'ರಾಮರಾಜ್ಯ'ವನ್ನು ಕಾರ್ಯರೂಪ
ಚರಣೆಗೆ ತರಬೇಕೆಂಬುದು ಶ್ರೀ ಪಿ. ಐ.
ಬೆಳ್ಯಪ್ಪನವರ ಪಾರ್ಟಿಯ ತತ್ವವಾದರೆ
ಇವರ ಎದುರು ಪಾರ್ಟಿಯವರ ತತ್ವವು
'ಕೊಡಗಿನ ಈಗಿನ ಸ್ಥಿತಿಯಲ್ಲಿ ಎಂದರೆ ಅ
ದರ ಸಣ್ಣತನ ಮತ್ತು ಆರ್ಥಿಕ ಅಡಚಣೆ
ಯಿಂದಾಗಿ, ಅದಕ್ಕೆ ಪ್ರತ್ಯೇಕವಿರಲು ಸಾ
ಧ್ಯವಿಲ್ಲದರಿಂದ ಅದರ ಉದ್ಧಾರವಾಗದೇ
ಕಾದರೆ, ಅದು ಮೈಸೂರು ಯೂ
ನುಂಬರುವ ಕರ್ನಾಟಕದ ಒಂದು
ಭಾಗವಾಗಿ ಸಂಯೋಜನೆ ಆಗಲೇಬೇಕು.
ಅದುದರಿಂದ ಕೊಡಗನ್ನು ಮೇಲ್ಕಂಡ
ದೊಡ್ಡ ಪ್ರಾಂತದೊಂದಿಗೆ ಸೇರಿಸುವ ಪ್ರ
ಯತ್ನವೇ ಅವರ ಮುಖ್ಯ ತತ್ವವಾಗಿದೆ.
ಹೀಗೆ ಈ ಎರಡು ಪಾರ್ಟಿಗಳೊಳಗೆ, ಕೊ
ಡ ಗಿ ನ ಭವಿಷ್ಯದ ವಿಷಯದಲ್ಲಿ
ಇಂತಹ ಮಹತ್ತರವಾದ ವ್ಯತ್ಯಾಸ
ವಿದ್ದರೂ, ಕಾಂಗ್ರೆಸ್ ಪಾರ್ಟಿಯ ಮುಂ
ದಾಳುಗಳು ಓಟರರ ಬೆಂಬಲ ಕೇಳುವಾ
ಗ್ಗೆ, ಇದನ್ನು ಬಚ್ಚಿಡಲು ಪ್ರಯತ್ನಪಡು
ವುದಲ್ಲದೆ, ರಾಜಕೀಯ ಪರಿಜ್ಞಾನದಲ್ಲಿ
ಹೆಚ್ಚಿನ ತಿಳುವಳಿಕೆ ಇಲ್ಲದ ಅನೇಕ ಓಟ
ರುಗಳ ಮುಂದೆ ಕೆಲವು ಅಪಪ್ರಚಾರಗಳ
ನ್ನೂ ಹರಡುತ್ತಿದ್ದಾರೆ. ಅಂತಹ ಅಪಪ್ರ
ಚಾರಗಳಲ್ಲಿ, ನನ್ನ ಅವಗಾಹನೆಗೆ ಬಂದ
ಕೆಲವನ್ನು ಇಲ್ಲಿ ನಾನು ಪ್ರಕಟಿಸುವು
ದಾಗಿದೆ.

ಒಂದನೆಯದಾಗಿ ಕೆ. ಪಿ. ಸಿ. ಸಿ. ಯ
ವರು ನಿಲ್ಲಿಸಿರುವ ಕಾಂಗ್ರೆಸ್ ಮುಂಬಾ
ಳುಗಳಲ್ಲಿ ಕೆಲವರು 'ನಾವು ಸಂಯೋಜ
ನಾವಾದಿಗಳಲ್ಲ ಪ್ರತ್ಯೇಕವಾದಿಗಳು
ಮತ್ತು ನಮ್ಮನ್ನು ಕಾಂಗ್ರೆಸ್ ಪರವಾಗಿ
ನಿಲ್ಲಿಸುವಾಗಲೂ ಸಹ ನಾವು ಈ ಅಭಿ
ಪ್ರಾಯವನ್ನು ಕೆ. ಪಿ. ಸಿ ಸಿ. ಪ್ರೆಸಿಡೆಂಟ
ರಿಗೂ, ಮತ್ತು ಕೊಡಗು ಪ್ರಾಂತೀಯ ಕಾಂ
ಗ್ರೆಸ್ ಕಮಿಟಿಯವರಿಗೂ ತಿಳಿಸಿರುವುದಲ್ಲ
ದೆ ಮುಂದೆ ಈ ಎಸೆಂಬ್ಲಿಯಲ್ಲಿ ಆ ವಿಷಯಂ
ನಿರ್ಣಯಕ್ಕೇನಾದರೂ ಬಂದಲ್ಲಿ, ನಾವು
ಈ ಚರ್ಚೆಯಲ್ಲಿ ಭಾಗವಹಿಸದೆ, ಅದಕ್ಕೆ
ವಿರೋಧಿಸುತ್ತೇವೆಂದೂ ಹೇಳಿರುವುದಲ್ಲ
ದೆ, ಈ ಸಂಗತಿಯನ್ನು ಪತ್ರಿಕೆಗಳಲ್ಲಿ ಪ್ರ
ಕಟಣೆಯನ್ನೂ ಮಾಡಿದರೂ. ಇದರಿಂದ ಒಂ
ದು ಸಂಗತಿ ಸ್ಪಷ್ಟವಾಗಿ ರುಜುವಾತು ಆ
ದಂತಾಯಿತ್ತು. ಅದೇನೆಂದರೆ ಈ ಉ
ನೇದುವಾರರನ್ನು ಆರಿಸುವ ಸಮಯ
ದಲ್ಲಿ ಕೊಡಗಿನ ಭವಿಷ್ಯದ ನಿರ್ಣಯದ
ಮಾತು ಅಲ್ಲಿ ಬಂದಿಲ್ಲ ಮತ್ತು 'ಕೆ. ಪಿ.
ಸಿ. ಸಿ. ಮತ್ತು ಕೊಡಗು ಪ್ರಾ. ಕಾ. ಕ
ಮಿಟಿಯವರು ಕೊಡಗನ್ನು ಸಂಯೋಜನೆ
ಹೊಡಬೇಕೆಂಬ ಗುರಿಯನ್ನು ಬಿಟ್ಟಿಲ್ಲ'
ಎಂಬುವುದು ಅಲ್ಲದಿದ್ದರೆ ಕಾಂಗ್ರೆಸ್ ಪಾ
ರ್ಟಿಯ ಉಮೇದುವಾರರ ಪೈಕಿ ಕೆಲವರು
ಈ ತರದ ವಿರೋಧದ ಅಭಿಪ್ರಾಯವನ್ನು
ಸೂಚಿಸಲಿಕ್ಕಾಗಲೀ, ಪ್ರಕಟಿಸಲಿಕ್ಕಾಗಲೀ
ಸಂದರ್ಭವೇ ಇರಲಿಲ್ಲ. ಎರಡನೆಯದಾ
ಗಿ, ಶ್ರೀಮಂತ ನೆಹರೂರವರು ಶ್ರೀ. ಪಿ.
ಐ. ಬೆಳ್ಯಪ್ಪನವರಿಗೆ ಬರೆದ ಪತ್ರವನ್ನು
ಪ್ರಕಟಿಸುವುದರ ಬದಲು ಇವರು ಇಷ್ಟತ್ಕೃ
ಷ್ಟಾಲ್ಯ ಜನರು ಕೊಡಗಿನ ಭವಿಷ್ಯದ ನಿ
ರ್ಣಯದಲ್ಲಿ 'ನಾವೆಲ್ಲಾ ಸಂಪೂರ್ಣ ಪ್ರ
ತ್ಯೇಕವಾದಿಗಳು' ಎಂಬ ಒಂದು ಅಧಿಕೃತ
ಹೇಳಿಕೆಯನ್ನಾದರೂ ಪ್ರಕಟಿಸುತ್ತಿದ್ದರು.
ಅದರೆ ಇವರು 'ಈ ವಿಶೇಷೀಕರಣ' ತತ್ವಕ್ಕೆ
ಬದ್ಧರಾಗಿರುವ ಪ್ರಯತ್ನ ಇಂತಹ ಮಹ
ತ್ವರವಾದ ವಿಷಯದಲ್ಲಿ ನಿರ್ಧಾರವಾದ
ಯಾವುದೊಂದು 'ಅಭಿಪ್ರಾಯವನ್ನು ಬರ
ವಣಿಗೆಯಲ್ಲಿ ಕೊಡದೆ, ಮುಂದಕ್ಕೆ ಕಟ್ಟು
ಬೀಳದ ರೀತಿಯಲ್ಲಿ ಅದನ್ನು ತಳ್ಳಲು ಪ್ರ
ಯತ್ನಿಸುತ್ತಿದ್ದಾರೆ. ಈ ರೀತಿಯಲ್ಲಿ ತಾ
ವು ಅನೇಕ ವರ್ಷಗಳಿಂದ ಪ್ರತಿಪಾದಿಸು
ತ್ತಿದ್ದ ಧ್ಯೇಯ ಮತ್ತು ಗುರಿಯನ್ನು ಬರೇ
ಚುನಾವಣೆಯಲ್ಲಿ ಜಯಶೀಲರಾಗಬೇಕೆಂ
ಬ ಗುರಿಯಿಂದ ಬಲಿಕೊಡುವುದು ಯೋ
ಗ್ಯವಲ್ಲ. ಒಂದು ವೇಳೆ ಇವರು ತಮ್ಮ
ಅಭಿಪ್ರಾಯವನ್ನು ನಿಜವಾಗಿಯೂ ಬದ
ಲಾಯಿಸದೆ, ಬರೇ ಜನರನ್ನು ವಂಚಿಸಲು
ಹೀಗೆ ಹೇಳುವುದಾದರೆ ಅದು ಕೇವಲ ಕ
ಮ್ಮಿ ತರಗತಿಯ ನಡವಳಿಕೆ ಎಂದೇ ಭಾ
ವಿಸಬೇಕಾಗಿದೆ.

ಎರಡನೆಯದಾಗಿ, ಕೊಡಗು ಕಾಂಗ್ರೆ
ಸ್ ಪಾರ್ಟಿಯವರು—ಶ್ರೀಮಂತ ನೆಹರೂ
ರವರ ಪತ್ರವನ್ನು ಅಚ್ಚುಹಾಕಿಸಿ, ಎಲ್ಲರ
ಲ್ಲಿಯೂ ಹಂಚಿರುತ್ತಾರೆ, ಈಗಿನ ಇಲೆ
ಕ್ಷನ್ ರೂಲು ಪ್ರಕಾರ ಚುನಾವಣೆಗೆ ಸ
ಮ್ಮಂಧದ ಯಾವುದಾದರೊಂದು ಹಸ್ತಪ
ತ್ರಿಕೆ ಯೂ ಪ್ರಕಟಣೆಯನ್ನು ಹೊರಡಿಸಿ
ದರೆ, ಅದನ್ನು ಪ್ರಕಟಿಸಿದವರ ದಸ್ಕತ್ತು
ಮತ್ತು ಅಂತಹ ಪ್ರತಿ ಪ್ರಿಂಟಾದ ಪ್ರಾಪ
ಪ್ರೆಯ ಹೆಸರು ಅದರಲ್ಲಿರಬೇಕೆಂದಿದೆ.
ಅದರೆ, ನನ್ನ ಕೈಸೇರಿದ ಈ ಪ್ರತಿಯಲ್ಲಿ ಆ
ವೆರಡೂ ಇಲ್ಲ ಅಲ್ಲದೆ, ಈ ಕಾಗದವ
ನ್ನು ಶ್ರೀಮಂತ ನೆಹರೂರವರ ಮತ್ತು
ಶ್ರೀ. ಬೆಳ್ಯಪ್ಪನವರ ಒಪ್ಪಿಗೆ ಪಡೆದು ಬಹಿ
ರಂಗಪಡಿಸಿರುವರೋ ಎಂಬುವುದೂ ಗೊ
ತ್ತಿಲ್ಲ. ಏನೇ ಇರಲಿ, ಈ ಪತ್ರದಲ್ಲಿ ಬರೆ
ದಿರುವದಾದರೂ ಏನು? 'ಕಾಂಗ್ರೆಸ್ ಪ್ರ
ಸಿಡೆಂಟರಾದ ನೆಹರೂರವರ ಅಭಿಪ್ರಾಯ
ದಲ್ಲಿ, 'ಕೊಡಗಿನ ಸಂಯೋಜನೆಯ ಪ್ರಶ್ನೆ
ಈಗ ಬರುವುದಿಲ್ಲ ಮತ್ತು ಮುಂಬರುವ
ಚುನಾವಣೆಗೂ ಅದಕ್ಕೂ ಸಮ್ಮಂಧವಿಲ್ಲ.
ಹೀಗಿರುವಾಗ್ಗೆ ಸಂಯೋಜನೆ ಪ್ರಶ್ನೆಯ
ಮೇಲೆ ಈ ಚುನಾವಣೆಯನ್ನು ನಡೆಸುವು
ದು ಅಗತ್ಯವಿಲ್ಲದ ವಿಚಾರ, ಕೇವಲ ಆ
ಸಂಬದ್ಧ ಮತ್ತು ಅವಿವೇಕ'.....ಅಷ್ಟ
ಲ್ಲದೆ ಅವರು ಅದನ್ನು ನಿರಾಕರಿಸಿದ್ದಾಗ
ಲೀ, ಯಾ ಈ ಪ್ರಶ್ನೆಯನ್ನು ಈಗ ಎತ್ತ
ಲೇ ಬಾರದೆಂದಾಗಲೀ ಕಟ್ಟಪ್ಪಣೆಯನ್ನೇ
ನೂ ಮಾಡಿರುವುದಿಲ್ಲ. ಆಷ್ಟೇ ಅಲ್ಲ, ಕೆ
ಡೆಯಲ್ಲಿ ಅವರು ಹೀಗೆ ಬರೆದಿದ್ದಾರೆ' 'ಹೇ
ಗೂ ನೀವು (ಎಂದರೆ, ಬೆಳ್ಯಪ್ಪನವರೂ ಮ
ತ್ತು ಅವರೊಡನೆ ಕಾಂಗ್ರೆಸಿಗೆ ರಾಜೀನಾಮೆ
ಕೊಟ್ಟವರೂ) ನಿಮ್ಮ ಪತ್ರದಲ್ಲಿ ಸೂಚಿಸಿ
ರುವ ರೀತಿ ವರ್ತಿಸಬೇಕೆಂದು ಹಠಮಾಡು
ವುದಾದರೆ, ನಿಮ್ಮ ಇಷ್ಟದಂತೆ ನಡೆದುಕೊ
ಳ್ಳಬಹುದು ಎಂದು.'

ಸಂಗತಿಯು ಹೀಗಿದ್ದರೂ, ಈ ಪತ್ರ
ವು ಹೊರಬರುವುದಕ್ಕೆ ಮೊದಲು ಶ್ರೀಯುತ
ತ ನೆಹರೂರವರು ಬೆಳ್ಯಪ್ಪನವರಿಗೆ ಒಂದು
ಬಹಳ (Nasty) ಶು ಟ್ಟ ಕ ರ ದ
ಕಾಗದ ಬರೆದಿರುತ್ತಾರೆಂದು ಒಂದು ಅಪ
ಪ್ರಚಾರ ಹೊರಟಿತ್ತು. ಈ ಸಮಾಚಾರ
ವನ್ನು ಕೇಳಿ, ಆ ಕಾಗದ ಎಂತಹದಿರಬ
ಹುದೆಂಬ ಕುತೂಹಲ ಸ್ವಾಭಾವಿಕವಾಗಿ
ನಮ್ಮಲ್ಲಿ ಹುಟ್ಟಿತ್ತು. ಆದರೆ ಆ ಕಾಗದ
ವು ಹೊರಬಿದ್ದಾಗ ಅದರಲ್ಲಿ ಪ್ರಚಾರವಾ
ದ ರೀತಿಯ ಯಾವುದೊಂದು 'ತುಚ್ಛತನ'
ವೂ ಅದರಲ್ಲಿ ಕಂಡುಬರಲಿಲ್ಲ.

'ಆ ಮೇಲೆ "ನೆಹರೂರವರು ಈ ಪ್ರ
ಶ್ನೆಯನ್ನು ಈಗ ಎತ್ತಕೂಡದು" ಎಂದು
ಅಪ್ಪಣೆ ಮಾಡಿರುತ್ತಾರೆ. ಆದಾದರಿಂದ
"ಆ ಪ್ರಶ್ನೆ ಈ ಚುನಾವಣೆಯಲ್ಲಿ ಬರುವು
ದಿಲ್ಲ" ಎಂಬೀ ಪ್ರಚಾರ ಬಹು ಬಿರುಸಾ
ಗಿ ನಡೆಯಿತು. ಆದರೆ ಶ್ರೀ. ಬೆಳ್ಯಪ್ಪನ
ವರಿಗೂ ಶ್ರೀ. ನೆಹರೂರವರಿಗೂ ನಡೆಸಿ
ಎಲ್ಲಾ ಪತ್ರಗಳನ್ನು ಪತ್ರಿಕೆಯಲ್ಲಿ ಪ್ರಕಟಿ
ಸಿದುದರಿಂದ ಈ ಪ್ರಚಾರವೂ ಸ್ವಾಭಾವಿ
ಕವಾಗಿ ಅದು ಹುಟ್ಟಿದಷ್ಟೆ ತೊಟ್ಟಲ್ಲೇ
ಪತ್ತಂತಾಯಿತು.

ಈಗ ಕಡೆಯದಾಗಿ ಇನ್ನೊಂದು ವಿ
ಶೇಷತರದ ಪ್ರಚಾರವು ಈಗ ಹೋಬಿದ್ದಿ
ದೆ. ಅದೇನೆಂದರೆ " ಶ್ರೀ. ನೆಹರೂರವ
ರು ಅಷ್ಟು ಕಂಠೋಕ್ತವಾಗಿ ಈ ಪ್ರಶ್ನೆಯಂ
ನ್ನು ಈಗ ಎತ್ತಬಾರದು. ಕಾಂಗ್ರೆಸ್
ಮುಂದಾಳುಗಳನ್ನೇ ಜಯಶೀಲರನ್ನಾ
ಗಿ ಮಾಡಬೇಕೆಂದು" ಹೇಳಿದುವಾಗ್ಗೆ,
ಶ್ರೀ. ಬೆಳ್ಯಪ್ಪ ಮತ್ತು ಅವರ ಪಾರ್ಟಿಯ
ವರು ಈಗ ಈ ಅಪ್ಪಣೆಗೆ ವಿರೋಧವಾಗಿ
ಕಾಂಗ್ರೆಸಿಗೆ ವಿರೋಧವಾಗಿ ಚುನಾವಣೆ
ಗೆ ನಿಂತು, ಒಂದು ವೇಳೆ ಜಯಶೀಲರಾ
ದರೆ, ನೆಹರೂರವರು ಸಿಟ್ಟಿನಿಂದ ಅರಸು
ತಿಂಗಳಲ್ಲಿ ಯಾರನ್ನೂ ಕೇಳದೆಯೇ ಕೊಡ
ಗನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಿಬಿಡುತ್ತಾ
ರೆ. ಅಲ್ಲದೆ ಶ್ರೀ. ನೆಹರೂರವರಿಗೆ ಕೊ
ಡಗಿನ ಮೇಲೆ ಬಹಳ ಪ್ರೀತಿ, ಗೌರವವಿ
ತ್ತು. ಆದನ್ನು ಈ ಬೆಳ್ಯಪ್ಪನವರೂ, ಅ
ವರ ಅನುಯಾಯಿಗಳೂ, ತಮ್ಮ ದುರ್ವ್ಯ
ವಹಾರನೆಯಿಂದ ಹಾಳು ಮಾಡಿ ಬಿಡುತ್ತಾ
ರೆ" ಎಂಬುದಾಗಿ.

ಈ ಅಪಪ್ರಚಾರವು ಎಷ್ಟರ ಮಟ್ಟಿ
ಗೆ ನಿಷ್ಕಾರಣವಾದುದೆಂದು ಹೇಳಬೇಕಾ
ಗ್ಗಿಲ್ಲ ಅಂತರಾಷ್ಟ್ರೀಯ ಮುಂದಾಳು ಆಗಲು
ಯೋಗ್ಯನೆಂದೂ, ಲೋಕವೇ ಬೆರಗಿನಿ
ತೋರಿಸುತ್ತಿರುವ ಶ್ರೀ. ಪಂಡಿತಜವಾಹರ್
ಲಾಲ್ ನೆಹರೂರವರಿಗೆ ತಾತ್ಕಾಲಿಕ್ಯ
ತಿಂಚಿತ್ ಭಾವನೆಯಂ ಪ್ರಭಾವವನ್ನು
ಹೊತಿಸುವಷ್ಟು ಬಹು ನೀಚ ವಿಷಯವೆ
ಎಂದೇ ಕೇಳಬೇಕಾ ಅಷ್ಟಲ್ಲದೆ
ಯುತರು ಎಲ್ಲಿ ಅಂತಹ ಕಟ್ಟಪ್ಪಣೆಯ

ಮುಂಬರುವ ಚುನಾವಣೆಯಲ್ಲಿ

ಕೊಡಗಿನ ಮತದಾರರಲ್ಲಿ ಒಂದು ಬೇಡಿಕೆ.

ಲೇ:-ಶ್ರೀ ಸಿ. ಎಂ. ಭೀಮಯ್ಯ.

ಬೆಳ್ಳಪ್ಪ ಮತ್ತು ಪಾರ್ಟಿಯವರ ಮೇಲೆ ಮಾಡಿದ್ದಾರೆಂಬುವುದು ಅವರು ಬರೆದ ಕಾಗದದಲ್ಲಿ ಎಲ್ಲಿಯೂ ಕಾಣುವಂತಿಲ್ಲ. ಅಷ್ಟೇ ಅಲ್ಲ ಶ್ರೀ ಬೆಳ್ಳಪ್ಪನವರು ಕಾಂಗ್ರೆಸಿನಿಂದ ಹೊರಗೆ ಬಂದಿದ್ದರೂ, ಅವರು ಕಾಂಗ್ರೆಸಿಗೆ ವಿರೋಧ ಪಾರ್ಟಿಗಳಿಗೆ ಸೇರಿಲ್ಲ. ಇದು ಶ್ರೀ ಬೆಳ್ಳಪ್ಪನವರೂ ಅವರ ಅನುಯಾಯಿಗಳು ಕಾಂಗ್ರೆಸಿಗೆ ಕೊಟ್ಟ ರಾಜೀನಾಮೆಯಲ್ಲೇ ಸ್ಪಷ್ಟವಾಗಿದೆ. 'ನಾವು ಬೇರೆ ಯಾವ ಪಾರ್ಟಿಗೂ ಸೇರಲು ಇಚ್ಛಿಸುವುದಿಲ್ಲವಾದುದರಿಂದ ಈ ಅಗಲು ವಿಕೆಯು ತತ್ಕಾಲಿಕವಾಗಿರುವುದು ಮತ್ತು ಚುನಾವಣೆಯಲ್ಲಿ ಜಯಹೊಂದಿದನಂತರ ಪುನಃ ಕಾಂಗ್ರೆಸಿಗೆ ಏನೊಂದೂ ಸಂಕೋಚವಿಲ್ಲದೆ ಸೇರಲಿರುವೆವು' ನಿವ್ವರಾಪ ಳಿ ಕಾಂಗ್ರೆಸ್ ಕೆಲಸಗಾರರು.' ಎಂದು ಸ್ಪಷ್ಟವಾಗಿ ಬರೆದಿರುವರು. ಸಂಗತಿಯು ಹೀಗಿರುವಾಗ 'ಶ್ರೀ ನೆಹರೂರವರಿಗೆ ಇವರ ಮೇಲೆ ಸಿಟ್ಟು ಬರಲಿಕ್ಕಾಗಿಲೀ ಯೂ, ಇವರ ಪಡಾವಳಿಕೆಯು ನೆಹರೂರವರಿಗೆ ಕೊಡಗಿನ ಬೇಲಿರುವ ಪ್ರೀತಿಯನ್ನು ನಿರ್ಮೂಲ ಮಾಡುವುದಕ್ಕಾಗಲೀ ಎಡೆ ಎಲ್ಲಿ ಹೆ? ಇವರು ಈ ತರಹದ ಅಪ ಪ್ರಚಾರಗಳಿಂದ ಪಂಡಿತಜೀಯವರ ಮೇಲೆ ಸಾಮಾನ್ಯ ಜನರಿಗೆ, ಅಲ್ಪ ಅಭಿಪ್ರಾಯಹುಟ್ಟಿಸುವಂತೆ ಮಾಡುವುದಾಗಿದೆ.

ಇವರು ಚುನಾವಣೆಯಲ್ಲಿ ಜಯಶೀಲರಾಗದೇಕೆಂದಿದ್ದರೆ, ಸರಿಯಾದ ಮಾರ್ಗದಲ್ಲಿ ಹೋಗಿ ತಮ್ಮ ಧ್ಯೇಯ ಯಾ ಗುರಿಯೊಯ್ವುದೆಂಬುವುದನ್ನು ಜನರ ಮುಂದಿಡುವುದು ಉತ್ತಮ. ಅದರ ಬದಲು ಕೋಮುವಾರು ವೈಮನಸ್ಯವನ್ನೋ, ಇನ್ನಿತರ ಅಪಪ್ರಚಾರಗಳನ್ನೋ, ಅದೂ ಪವಿತ್ರವಾದ ಕಾಂಗ್ರೆಸ್ ಸಂಸ್ಥೆಯ ಹೆಸರಿನಲ್ಲೂ ಮಹಾತ್ಮ ಗಾಂಧಿಜಿಯವರ ಹೆಸರಿನಲ್ಲೂ, ಮತ್ತೆ ಶ್ರೀ ನೆಹರೂರವರ ಹೆಸರಿನಲ್ಲೂ ಹೊರಡಿ ಹಿಂಜಾಗದ ಬಾಗಿಲಿಗಾಗಿ ಗದ್ದಲ ಗೆಗ್ಗೆ ಏರಲು ಪ್ರಯತ್ನಿಸುವುದು ಓಟರರಾದ ನಮ್ಮ ಮನಸ್ಸಿಗೆ ಬೇಸರವನ್ನೂ, ಸಂಶಯವನ್ನೋ ಹುಟ್ಟಿಸುವಂತಿದೆ

ಒಂದು ವೇಳೆ ಕಾಂಗ್ರೆಸಿನ ಮತ್ತು ಕೊಡಗು ಪ್ರಾಂತ್ಯದ ಇಂದಿನ ಹಿತದೃಷ್ಟಿಯಿರಿದ ಈ ಸಂಯೋಜನೆ ಯೂ ಪ್ರತ್ಯೇಕ ವಿರುವಿಕೆಯ ಪ್ರಶ್ನೆಯನ್ನು ಈಗ ಎತ್ತುವುದು ಅವಿವೇಕ ಯೂ ಅಯೋಗ್ಯವೆಂದು ಇವರು ಖಂಡಿತವಾಗಿಯೂ ಅವರ ಹೃದಯಪೂರ್ವಕವಾಗಿ ನಂಬುವುದಾದರೆ, ಅವರು ಯಾವ ರೀತಿಯಲ್ಲಿ ದೇಶದ ಹಿತಸಾಧನೆಯನ್ನು ಹಾಳು ಮಾಡುತ್ತದೆ ಎಂಬುದನ್ನು ಇವರು ವಿವರಿಸಬಹುದಿತ್ತು. ಒಂದು ಕಾರಣವನ್ನಾದರೂ ಕೊಟ್ಟಿಲ್ಲ. ಅದೇ ಅಲ್ಲ. ಈ ಪ್ರಶ್ನೆಯನ್ನು ಮುಂಬರುವ ಎಸೆಂಬ್ಲಿಯಲ್ಲಿ ಖಂಡಿತವಾಗಿಯೂ ಎತ್ತುವುದಿಲ್ಲ ಎಂಬುದನ್ನು ಸಹ ನಿರ್ವಿವಾದವಾಗಿ ಹೇಳಿಲ್ಲ. ಅದರ ಬದಲು ಕೆ. ಪಿ. ಸಿ. ಸಿ. ಯವರು ಅನೇಕ ವರ್ಷಗಳಿಂದ ಕಾಂಗ್ರೆಸಿನಲ್ಲಿ ದುಡಿದವರೂ, ನುರಿತವರೂ ಆದ ಅನೇಕ ಮುಂದಾಳುಗಳಿದ್ದರೂ ಸಹ ಅವರನ್ನೆಲ್ಲಾ ಬಿಟ್ಟು ಬರೀ ಸಂಯೋಜನೆಯ ಒಂದು ವಿಷಯದಲ್ಲಿ ಮಾತ್ರ ಬೆಂಬಲವೀಯುತ್ತಿದ್ದವರನ್ನೆ ಕಾಂಗ್ರೆಸ್ ಹುರಿಯಾಳುಗಳಾಗಿ ಆರಿಸಿರುವಾಗ್ಯೆ, ದೇಶಸ್ಥರಾದ ನಾವು ಹೇಗೆ ಇವರ ಮನಸ್ಸಿನ ಸತ್ಯವನ್ನು ತಿಳಿಯಬೇಕು. ಹೀಗೆ ಇವರ ಮಾತೊಂದು, ನಡವಳಿಕೆಯೊಂದು ಆಗಿರುವಾಗ ಓಟರುಗಳು ತಮ್ಮ ಮುಂದಾಳುಗಳನ್ನು ಈ ಪ್ರಶ್ನೆಯ ಮೇಲೆ ಆರಿಸಿದರೆ ಈ ಕೆ. ಪಿ. ಸಿ. ಸಿ. ಯವರಿಗಾಗಲೀ ಯಾ ಸಂಯೋಜನಾವಾದಿಗಳಿಗಾಗಲೀ ಉಂಟಾಗುವ ತೊಂದರೆಯಾದರೂ ಏನು? ಈಗ ಕಾಂಗ್ರೆಸಿಗೆ ಎದುರಾಗಿ ನಿಂತಿರುವ ಪಾರ್ಟಿಯವರಲ್ಲಿ ವಿದ್ಯಾವಂತರಾಗಲೀ, ಬುದ್ಧಿವಂತರಾಗಲೀ ಯಾರೂ ಇಲ್ಲವೆಂದು ಹೇಳಲು ಸಾಧ್ಯವಿಲ್ಲ ಒಂದು ಹೇಳಿ ಈಗಿನ ಸಂಯೋಜನಾವಾದಿಗಳೆಂದು ಹೇಳುವ ಕಾಂಗ್ರೆಸ್ ಮುಂದಾಳುಗಳೇ ಚುನಾಯಿತರಾದರೆ, ಇವರು ಎಲ್ಲಾದರೂ ನಮ್ಮ ದೇಶವನ್ನು ಬೇರೆ ಪ್ರಾಂತ್ಯಕ್ಕೆ ಸೇರಿಸಿಬಿಟ್ಟಾರೋ' ಎಂಬ ಹೆದರಿಕೆಯೂ ಸಂಶಯವೂ ಸ್ವತ್ಕೇಕವಾದಿಗಳಾದ ಓಟರುಗಳ ಮನಸ್ಸಿನಲ್ಲಿರುತ್ತದೆ. ಅವರ ಒಡಲು, ಪ್ರತ್ಯೇಕವಾದಿಗಳ ಮುಂದಾಳುಗಳೇ ಬಹುಮತ್ಯದಿಂದ ಚುನಾಯಿತರಾದರೆ, ಸಂಯೋಜನೆಯು ಎಂತೇ ತತ್ಕಾಲಕ್ಕೆ ಇಲ್ಲವೆಂದಾದ ಮೇಲೆ, ಯಾವ ಓಟರನಿಗೂ ವ್ಯಸನಕ್ಕೂ, ಸಂಶಯಕ್ಕೂ ಹೆದರಿಕೆಗೂ ಎಡೆಯೇ ಇರುವುದಿಲ್ಲವಷ್ಟೆ. ಆದುದರಿಂದ ಪ್ರತ್ಯೇಕವಾದಿಗಳನ್ನೇ ಈ ಚುನಾವಣೆಯಲ್ಲಿ ಜಯಶೀಲರನ್ನಾಗಿ ಮಾಡುವುದು ಎಲ್ಲಾ ಓಟರುಗಳ ಹಿತದೃಷ್ಟಿಯಿಂದ ಸಮರ್ಪಕವಾಗಿದೆ.-

ನಮ್ಮ ಪ್ರಾಂತ್ಯದ ಚುನಾವಣೆಯು ಜನವರಿ ತಾ. ೧೫ರಿಂದ ಪ್ರಾರಂಭವಾಗಬೇಕಾಗಿದೆ. ಈಗಾಗಲೇ ಚುನಾವಣೆ ಜ್ವರವು ಬಹು ಜೋರಾಗಿ ಹಿಡಿದಂತೆ ಕಾಣುತ್ತದೆ. ಆದರೆ ಪ್ರತಿ ಒಂದು ಕಡೆಯಲ್ಲಿ ಸಭೆ ಸೇರಿದಲ್ಲಿ ಪಕ್ಷಗಳು ಹೀಯಾಳಿಸಿ ಮಾತಾಡುವುದಲ್ಲದೆ ತತ್ವ ಮಂಡಿಸಬಹುದಾದ ಯಾ ಮಾಡುವ ಕೆಲಸಗಳನ್ನು ಹೇಳುತ್ತಿಲ್ಲ. ಜೆರೆದುದರಿಂದಾಗಲೀ, ಹೀಯಾಳಿಸಿದಿಂದಾಗಲೀ ಜನತೆಗೆ ಏನೂ ಪ್ರಯೋಜನವಾಗುವ ಹಾಗಿಲ್ಲ.

ಒಂದಾನೊಂದು ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಅದರಲ್ಲೂ ರಾಷ್ಟ್ರದ ಪಿತಾಮಹನಾದ ಮಹಾತ್ಮ ಗಾಂಧಿಯವರನ್ನು ಜರಿದು ಅಲ್ಲಗಳೆದವರು ಮತ್ತು ರಾಷ್ಟ್ರದ ಮುಖಂಡರ ಭಾವ ಚಿತ್ರಗಳನ್ನು ಕೂಡ ತಮ್ಮ ಭವನಗಳಲ್ಲಿ ಇಡಲಿಕ್ಕೆ ಹೆದರಿದವರು ಸ್ವಾತಂತ್ರ್ಯ ಸಿಕ್ಕಿದ ಮಾರನೆ ದಿನ ಕೆಲವು ಓತಿಗಳು (Political chemmalions) ಇಂದು ಪ್ರಧಾನ ಕಾಂಗ್ರೆಸಿಗರೆಂದು ಸೇರಿಯುವುದನ್ನು ನೋಡಿದರೆ ಯಾರಿಗೆ ತಾನೆ ನಾಚಿಕೆಯೂಗಲಿಕ್ಕಿಲ್ಲ? ಈ ಓತಿಗಳು ಯಾರೆಂದು ಪ್ರತಿಯೊಬ್ಬ ದೇಶೀಯನಿಗೆ ತಿಳಿದವರಾಗಿದ್ದಾರೆ. ಇವರು ಇನ್ನು ಮುಂದೆ ಧರ್ಮಕ್ಕೆ ಎಷ್ಟು ಬೆಲೆ ಕೊಟ್ಟಾರೆಂಬುದು ವೇದ್ಯವಾಗುತ್ತದೆ.

ಇನ್ನೊಂದು ಕಾಲದಲ್ಲಿ ನಮ್ಮ ಪ್ರಾಂತ್ಯವನ್ನ ಧಾರೆ ಎರೆದು ಕೊಡಬೇಕೆಂದು ಭಗೀರಥ ಪ್ರಯತ್ನ ಹಟ್ಟಿದವರು ಇಂದು ನಾವೂ ಕೂಡ ಪ್ರತ್ಯೇಕವಾದಿಗಳು ಎಂದು ಹೇಳುವುದಲ್ಲದೆ ಅದಿಯ ಕಾಂಗ್ರೆಸಿಗರಾಗಿರುವವರು ಇಂಥ ಜಾಗ ನೋಡಿ ಲಾಗ ಹಾಕುವ ಕಾಂಗ್ರೆಸಿಗರನ್ನು ಮತದಾರರಾದ ನಾವು ಗುರುತಿಸಬೇಕಾದದ್ದು ನಮ್ಮ ಕರ್ತವ್ಯ. ಈ ಸಂದರ್ಭದಲ್ಲಿ ನಮ್ಮ ಪ್ರಾಂತ್ಯದಿಂದ ರಾಜ್ಯಪುನರ್ನಾಸಭೆಗೆ ಪ್ರತಿನಿಧಿಗಳೆಂದು ಆರಿಸಿ ಹೋದ ಶ್ರೀ ಜೆಪ್ಪು ಡೀರ ಪೂಣಚ್ಚನವರು ಆ ಸಭೆಯಲ್ಲಿ ಎಷ್ಟರ ಮಟ್ಟಿಗೆ ನಮ್ಮ ಪ್ರಾಂತ್ಯವನ್ನು ಸಂಯೋಜಿಸಬೇಕೆಂದು ಹೋರಾಡಿದವರು, ತಮ್ಮ ಕರ್ತವ್ಯವನ್ನು ಪ್ರಾಂತ್ಯದ ಮಟ್ಟಿಗೆ ಮಾಡಿದೆ, ಚುನಾವಣೆ ಮತ್ತು ಜವಾಬ್ದಾರಿ ಸರಕಾರ ಬರುತ್ತದೆ ಎಂದು ತಿಳಿದ ಕೂಡಲೇ, ಡೆಲ್ಲಿ ಪ್ರಾಂತ್ಯದ ದಿವಂಗತ ದೇಶ ಬಂಧು ಗುಪ್ತರಸಿ ಪಾರ್ಥನ್ನ ಪತ್ರವನ್ನು ತಿಡಿದು ದೇಶದ ಉದ್ಧಗಲಕ್ಕೂ ತಾನೂ ಸಹ 'ಸಿ' ಪ್ರಾಂತ್ಯಗಳ ಸುಧಾರಣೆಗೆ ಹೋರಾಡಿದೇನೆಂದು ಅವರ ಒಡಲು, ಪ್ರತ್ಯೇಕವಾದಿಗಳ ಮುಂದಾಳುಗಳೇ ಬಹುಮತ್ಯದಿಂದ ಚುನಾಯಿತರಾದರೆ, ಸಂಯೋಜನೆಯು ಎಂತೇ ತತ್ಕಾಲಕ್ಕೆ ಇಲ್ಲವೆಂದಾದ ಮೇಲೆ, ಯಾವ ಓಟರನಿಗೂ ವ್ಯಸನಕ್ಕೂ, ಸಂಶಯಕ್ಕೂ ಹೆದರಿಕೆಗೂ ಎಡೆಯೇ ಇರುವುದಿಲ್ಲವಷ್ಟೆ. ಆದುದರಿಂದ ಪ್ರತ್ಯೇಕವಾದಿಗಳನ್ನೇ ಈ ಚುನಾವಣೆಯಲ್ಲಿ ಜಯಶೀಲರನ್ನಾಗಿ ಮಾಡುವುದು ಎಲ್ಲಾ ಓಟರುಗಳ ಹಿತದೃಷ್ಟಿಯಿಂದ ಸಮರ್ಪಕವಾಗಿದೆ.-

ಹೇಳುವವರಲ್ಲಿ ಏನು ತಿರುಳಿದೆ ಎಂಬುದನ್ನು ಮತದಾರರು ತಿಳಿದುಕೊಳ್ಳಬೇಕು. ನಿಜವಾಗಿ ಪ್ರಾಂತ್ಯದ ಪರ ಕೆಲಸ ಮಾಡಿದ್ದರೆ ಈ ಸಿಫಾರಸು ಪತ್ರಿಕೆಯ ಅವಶ್ಯಕತೆ ಏನು? ಇದರಿಂದ ಈ ಮಹನೀಯರಿಗೆ ತಮ್ಮ ಮೂಲ್ಯ ತತ್ವದ ಮೇಲೆ ಎಷ್ಟು ಅಭಿಮಾನವಿದೆ ಎಂಬುದು ವೇದ್ಯವಾಗುತ್ತದೆ. ಇದನ್ನು ಇವರ ಕ್ಷೇತ್ರದ ಮತದಾರರು ಜೆನ್ನಾಗಿ ತಿಳಿದುಕೊಳ್ಳಬೇಕು. ಇಷ್ಟರಲ್ಲಿ ತೃಪ್ತಿಹೊಂದದೆ, ಮಾನ್ಯ ಪ್ರಧಾನ ಮಂತ್ರಿಜವಾಹರ್‌ಲಾಲ್ ನೆಹರೂರವರು ಚುನಾವಣೆಗೆ ನಿಲ್ಲುವ ಸಂಧರ್ಭ ಬರೆದ ಪತ್ರವನ್ನು (ಇದು ದೇಶಿಯರಿಗೆ ತಿಳಿದ ವಿಷಯ) ಇಸ್ಪೇಟಿನ ತುರುಪಾಗಿ (Trumph Card) ಆಗಿ ಇಟ್ಟುಕೊಂಡು ಹಸ್ತಪತ್ರಿಕೆಯ ಮೂಲಕ ಹಂಚಿಸುವುದಲ್ಲದೆ, ಪ್ರತಿ ವಿಂಟಿಂಗ್‌ಗಳಲ್ಲಿ ಓದುವುದನ್ನು ನೋಡಿದರೆ ಓರ್ವ ವ್ಯಕ್ತಿಯು ತನ್ನ ಆತ್ಮವಂಚನೆಯನ್ನು ಮಾಡಿ ತತ್ವಗಳನ್ನು ಬದಿಗಿಟ್ಟು ಅಧಿಕಾರಕ್ಕೆ ಹೇಗಾದರೂ ಬರಬೇಕೆಂದು ಸಾಧಿಸುತ್ತಾನೆಂಬುದು ವೇದ್ಯವಾಗುತ್ತದೆ. ಇತ್ತೀಚೆಗೆ ಹುಬ್ಬಳ್ಳಿಯಿಂದ ಕೇಂದ್ರ ಮಂತ್ರಿ ಮಂಡಳದಲ್ಲಿರುವ ಶ್ರೀ. ದಿವಾಕರರು ಹೊರಡಿಸಿದ ಒಂದು ಹೇಳಿಕೆಯನ್ನು ಕೊಡಗಿಗೂ ಚುನಾವಣೆಗೂ, ಅದರ ಆಸ್ತಿತ್ವಕ್ಕೂ ಯಾವ ಸಂಬಂಧವಿಲ್ಲ. ಆದುದರಿಂದ ನೆನ್ನೆ ಮೊನ್ನೆ ಕಾಂಗ್ರೆಸಿನ ಶಿಸ್ತಿಗೆ ಸೇರಿದವರಿಗೆ ಮತ ಕೊಡಬೇಕೆಂದು ಹೇಳುವುದನ್ನು ನೋಡಿದರೆ ಮತದಾರರನ್ನು ಎಷ್ಟರ ಮಟ್ಟಿಗೆ ಮಂಕುಮಾಡಿ ಮತ ಪಡೆಯಬೇಕೆಂದು ಪ್ರಯತ್ನಿಸುವುದು ಗೊತ್ತಾಗುತ್ತದೆ. ಇದರ ಜೊತೆಗೆ ಡಿಸೆಂಬರ್ ೫ ರಲ್ಲಿ ಮದ್ರಾಸಿನ ಎರಡು ದಿನಾಂಕ ಪತ್ರಿಕೆಗಳಲ್ಲಿ ಕೊಡಗಿನ ಭವಿಷ್ಯತ್ತಿನ ವಿಷಯ ಅನೇಕ ಟೊಳ್ಳಾದ ವಿಷಯಗಳಿಂದ ಕೂಡಿದ ಒಂದು ಬಾತ್ಮಿಯಿಂದಲೂ ತನ್ನ ಕಡೆಗೆ ಎಳೆಯಲಿಕ್ಕೆ ಪ್ರಯತ್ನಿಸುತ್ತಾರೆ.

ಈ ಮೊದಲು, ಕೊಡಗು ಮತ್ತಿತರ ಚೀಫ್ ಕಮಿಷನರರ ಪ್ರಾಂತ್ಯಗಳಿಗೆ ಸಾಧಾರಣೆ ಖಂಡಿತವಾಗಿ ಸಿಕ್ಕಲಿಕ್ಕಿಲ್ಲವೆಂದು ನಂಬಿದ್ದವರು, ದೇಶವನ್ನು ಮೊದಲಿನ ಹಿಜ್ಜೆಯಾಗಿ ವೈಸ್‌ರಾಯರಿಗೆ ಸಂಯೋಜಿಸಿ, ನಂತರ ಭಾವೀ ಕರ್ನಾಟಕಕ್ಕೆ ಸೇರಿಸಲೀ ಅನುವಾಡಿದವರು ಜವಾಬ್ದಾರಿ ಸರಕಾರ ಬಂದ ಕೂಡಲೇ ನಾವು ಕೂಡ ಇದಕ್ಕೆ ಬಹಳ ಪ್ರಯತ್ನಿಸಿದ್ದೇವೆ ಆದುದರಿಂದ ಇಂದು ನಾವು ಆದಿಯ ಕಾಂಗ್ರೆಸಿಗರಾಗಿ, ಆದರ ಚೌಟಿಯಲ್ಲಿ ಚುನಾವಣೆಗೆ ನಿಂತಿದ್ದೇವೆ ಎಂದರೆ ಇವರು ಎಷ್ಟು ಆತ್ಮವಂಚನೆ ಮಾಡುವ ಓಲೆಗಳೆಂದು ಗೊತ್ತಾಗುತ್ತದೆ. ಆದುದರಿಂದ ಆಯಾ ಕೇಂದ್ರದ ಮತದಾರರು ಈ ತರದ ಬಣ್ಣ ಬದಲಾಯಿಸಿ ಚುನಾವಣೆಯ ಮತ್ತು ಸಂದರ್ಭ ನೋಡಿಕೊಂಡು ಕಾಂಗ್ರೆಸ್ ಚೌಟಿಯಲ್ಲಿ ನಿಂತಿರುವವರನ್ನು ಆರಿಸಿದು ತಮ್ಮ ಪ್ರಾಣಕ್ಕಿಂತಲೂ ವಿಶ್ವಾಸವಿರುವ ಮತವನ್ನು ಯೋಗ್ಯರಿಗೆ ಕೊಡಬೇಕಾಗಿದೆ.

ಇನ್ನು ಮುಂದಕ್ಕೆ ಮತದಾರರು ಯಾರೂ ಪಕ್ಷಸಭೆಗಳಿಗೆ ಸೇರಿ ಅಪಪ್ರಚಾರಕ್ಕೆ ಒಳಗಾಗದೆ ಬದಲು ಪ್ರತಿಯೊಬ್ಬ ಮತದಾರನು ವ್ಯಕ್ತಿಗಳ ಪರಿಚಯವನ್ನು ಸ್ವತಃ ಮಾಡಿಕೊಂಡು ಯೋಗ್ಯರಿಗೆ ತಮ್ಮ ಮನವರಿಕೆಯಾಗುವಂತೆ ತಮ್ಮ ಮತವನ್ನು ಕೊಡಬೇಕೆಂದು ಈ ಪತ್ರದ ಮೂಲಕ ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಕೆಲವು ವಾರಗಳಿಗೆ ಹಿಂದೆ ಶ್ರೀ. ಕೆ. ಜಿ. ಐಯ್ಯಪ್ಪನವರು ಮತದಾರರ ಜವಾಬ್ದಾರಿಕೆ ಏನೆಂಬ ವಿಷಯದ ಪತ್ರವನ್ನು ವಾಚಕರು ಮತ್ತು ಮತದಾರರು ನೆನೆಗೆ ತಂದುಕೊಳ್ಳಬೇಕು.

ಕೊನೆಯುದಾಗಿ ಈ ಸಂದರ್ಭದಲ್ಲಿ ನಮ್ಮ ಪ್ರಾಂತ್ಯದ ಪಕ್ಷಗಳ ಜಗಳವನ್ನು ನೋಡುವಾಗ ಈ ಕಳಗೆ ಎತ್ತಿ ಬರೆದಿರುವ ಸೋಮೇಶ್ವರ ಶತಕದ ಹೀನೇ ಶ್ಲೋಕವು ನೆನಪಿಗೆ ಬಂದು ಇದರಲ್ಲಿ ಹೇಳಿರುವದನ್ನು ಈಗ ಎಷ್ಟರ ಮಟ್ಟಿಗೆ ಪರಿಹೋಗುತ್ತಿದೆ ಎಂಬುದನ್ನು ವಾಚಕರು ಮತ್ತು ಮತದಾರರು ತಿಳಿದುಕೊಳ್ಳಬೇಕು. ಅದರ ಅರ್ಥ ಹೀಗಿದೆ-ಕಳ್ಳತನ, ಜೂಜು, ವ್ಯಭಿಚಾರ, ಸ್ವಾಭಿಮಾನ, ಸುಳ್ಳು ಸಾಕ್ಷಿ, ಚಾಡಿ, ಮಂತ್ರಿಸ್ಥಾನಕ್ಕೆ ಮೋಸ ಇತ್ಯಾದಿಗಳನ್ನು ಆವಲಂಬಿಸಿಸಿ ಜನರು ರಾಜ ಗೌರವಕ್ಕೆ ಪಾತ್ರರಾಗುವರು, ದೇಶ ಪ್ರೇಮಿಗಳಾದ ಮತದಾರರೇ, ಜೋಕೆ! ಇಂಥಾ ಒಂದು ಸಮಸ್ಯೆಯು ಲೋಕದ ಎಲ್ಲೆಲ್ಲಿಯೂ, ಅದರಲ್ಲೂ ನಮ್ಮ ಪುಣ್ಯಭೂಮಿಯಲ್ಲಿ ಆಗಬಾರದೆಂದು ಹಾರೈಸಿ ಶ್ರೀಕಾವೇರಿ ಮಾತೆಯನ್ನು ಸ್ಮರಿಸಿ ಈ ಪತ್ರವನ್ನು ಮುಗಿಸುತ್ತೇನೆ.

೫ ನೆಯ ನಮೂನೆ.

[10 (3) ನಿಯಮ 11 ನೆಯ ನಿಬಂಧನೆಗಳು.]

ಇದಕ್ಕೆ ಜೋಡಿಸಿರುವ ದಕ್ಷಿಣ ಕೊಡಗು ತಾಲೂಕಿನ ಪ್ರತ್ಯೇಕ ಪ್ರತ್ಯೇಕ ಚುನಾವಣೆ ಕ್ಷೇತ್ರಗಳಿಂದ ಕೊಡಗು ವಿಧಾನ-ಸಭೆಗೆ (Coorg Legislative Assembly) ಚುನಾವಣೆ. ಸಿಂಧುವಾಗಿರತಕ್ಕ ನಾಮನಿರ್ದೇಶನಗಳ (Valid Nominations) ಪಟ್ಟಿ. ಚುನಾವಣೆಗೆ ಉಮೇದುವಾರರಾಗಿರತಕ್ಕವರ ಅಖೈರು ಪಟ್ಟಿ. (Final List of candidates for Election.)

ಅಂಜ್ರ ನಂ.	ಉಮೇದುವಾರನ ಹೆಸರು	ಉಮೇದುವಾರನ ವಿಳಾಸ		ಸಂಕೇತದ ಗುರುತು
		ಶ್ರೀಮಂಗಲ ಚುನಾವಣಾ ಕ್ಷೇತ್ರ		
1	ಕರುಂಬಯ್ಯ, ಮುಕ್ಕಾಟಿರ	.... ಕುಟ್ಟ ಗ್ರಾಮ, ಕುಟ್ಟ ಪೋಸ್ಟ್, ದ. ಕೊಡಗು ತಾಲೂಕು.	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
2	ಕರುಂಬಯ್ಯ, ಕೋಳೆರ	.... ವಕೀಲ್, ವೀರಾಜಪೇಟೆ, ದ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ ಪಕ್ಷ.)
††3	ಮೂರ, ಬೆಟ್ಟಕ್ಕುರುಬರ	.... ಕುಟ್ಟ ಗ್ರಾಮ, ಕುಟ್ಟ ಪೋಸ್ಟ್, ದ. ಕೊಡಗು ತಾಲೂಕು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
††4	ಸೆಬ್ಬಯ್ಯ, ಜಿ.	.... ಹೈಸೊಡ್ಲೂರು ಗ್ರಾಮ, ಹುದಿಕೇರಿ ಪೋಸ್ಟ್, ದ. ಕೊಡಗು ತಾಲೂಕು	....	ಹುಂಜ (ಪ್ರತ್ಯೇಕ)
		ಹುದಿಕೇರಿ ಚುನಾವಣಾ ಕ್ಷೇತ್ರ		
1	ಗಣಪತಿ, ತಾಕಮಾಡ	.... ಬೇಗೂರು ಗ್ರಾಮ, ಹುದಿಕೇರಿ ಪೋಸ್ಟ್, ದ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ)
2	ಮಾಚಯ್ಯ ಚೆಕ್ಕೆರ	.... ಗೋಣಿಕೊಪ್ಪಲ್ ದ. ಕೊಡಗು ತಾಲೂಕು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
3	ಪೊಣ್ಣಯ್ಯ, ಚೆಕ್ಕೆರ ಜಿ.	.... ಕೋಣಗೇರಿ ಗ್ರಾಮ, ಹುದಿಕೇರಿ ಪೋಸ್ಟ್ ದ. ಕೊಡಗು ತಾಲೂಕು	....	ಜೋಳ ಕದಿರು ಮತ್ತು ಕುಡುಗೋಲು (ಕಮ್ಯೂನಿಸ್ಟ್)
		ಬೆಟ್ಟತ್ತು ನಾಡು ಚುನಾವಣಾ ಕ್ಷೇತ್ರ		
1	ಪೂಣಚ್ಚ ಚೆಪ್ಪುಡಿರ	.... ಹೋಂತೋಟ, ಗೋಣಿಕೊಪ್ಪಲು, ದ. ಕೊಡಗು ತಾಲೂಕು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
2	ತಮ್ಮಯ್ಯ, ಜೇಂದಿರ	.... ಪೊನ್ನಂಪೇಟೆ ದ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ)
		ಪೊನ್ನಂಪೇಟೆ ಚುನಾವಣಾ ಕ್ಷೇತ್ರ		
††1	ಬೆಳ್ಳಿ, ಯಂರವರ	.... ನೊಮ್ಮಲ ಗ್ರಾಮ, ತಿತಿಮತಿ ಪೋಸ್ಟ್ ದ. ಕೊಡಗು ತಾಲೂಕು.	....	ನೊಗಹೇರಿದ ಎರಡು ಎತ್ತುಗಳು (ಕಾಂ)
2	ಗಣಪತಿ, ಬಿ. ಡಿ.	.... ಜರ್ನಲಿಸ್ಟ್, ಮಡಿಕೇರಿ, ಉ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ)
3	ಮಂತ್ತಣ್ಣ ಮೂಪಂಗಡ	.... ಕೊಟ್ಟಗೇರಿ ಗ್ರಾಮ, ಪೊನ್ನಂಪೇಟೆ ಪೋಸ್ಟ್ ದ. ಕೊಡಗು ತಾಲೂಕು	....	ಗಾಡಿ (ಸ್ವತಂತ್ರ)
4	ಮೂದಯ್ಯ, ಪುಚ್ಚಿಮಾಡ	.... ಸನ್ನಿ ಕಾಟೇಜ್, ಪೊನ್ನಪ್ಪ ಸಂತೆ ತೋಟ, ಗೋಣಿಕೊಪ್ಪಲ್ ಪೋಸ್ಟ್ ದ. ಕೊಡಗು ತಾಲೂಕು	....	ದೋಣಿ (ಸ್ವತಂತ್ರ)
5	ಕಾಣಿಯಮ್ಮಯ್ಯ ಪುತ್ತಮನೆ	.... ಪೊನ್ನಂಪೇಟೆ ದ. ಕೊಡಗ ತಾಲೂಕು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
††6	ಚಂಡ ಪಂಜ್ರ ಯಂರವರ	.... ನೊಮ್ಮಲ ಗ್ರಾಮ, ತಿತಿಮತಿ ಪೋಸ್ಟ್ ದ. ಕೊಡಗು ತಾಲೂಕು	....	ಹುಂಜ (ಪ್ರತ್ಯೇಕ)
		ವೀರಾಜಪೇಟೆ ಟೌನ್ ಚುನಾವಣಾ ಕ್ಷೇತ್ರ		
1	ಅಹಮ್ಮದ್ ಎಸ್. ಜಿ.	.... ವ್ಯಾಪಾರಿ, ವೀರಾಜಪೇಟೆ, ದ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ)
2	ರಾಮಮೂರ್ತಿ ಎಸ್. ಎಸ್.	.... ಅಡ್ವೋಕೇಟ್, ವೀರಾಜಪೇಟೆ, ದ. ಕೊಡಗು ತಾಲೂಕು	...	ನೊಗಹೇರಿದ ಎರಡು ಎತ್ತುಗಳು (ಕಾಂ)
		ವೀರಾಜಪೇಟೆ ನಾಡು ಚುನಾವಣಾ ಕ್ಷೇತ್ರ		
1	ಅಪ್ಪುವ್ವ ಪಾಲೇಕಂಡ	.... ಕಡನಾಡು ಗ್ರಾಮ, ವೀರಾಜಪೇಟೆ ಪೋಸ್ಟ್ ದ. ಕೊಡಗು ತಾಲೂಕು	....	ಗಾಡಿ (ಸ್ವತಂತ್ರ)
2	ಬೆಳ್ಯಪ್ಪ, ಬಿ. ಎ.	.... ಎಡಿಟರ್, ಜನ್ಮಭೂಮಿ, ಮಡಿಕೇರಿ ಉ. ಕೊಡಗು ತಾಲೂಕು	...	ನೊಗ ಹೇರಿದ ಎರಡು ಎತ್ತುಗಳು (ಕಾಂ)
3	ಬೆಳ್ಳಪ್ಪ, ಕಣ್ಣೀರಂಡ	.... ನಾಂಗಾಲ ಗ್ರಾಮ, ಬಿಟ್ಟಂಗಾಲ ಪೋಸ್ಟ್ ದ. ಕೊಡಗು ತಾಲೂಕು	...	ಸೈಕಲ್ (ಸ್ವತಂತ್ರ)
+ 4	ಕರುಂಬಿ, ಕೆಂಬಟ್ಟಿ	.... ಪಾಲ್ಗೂಲ ಗ್ರಾಮ ವೀರಾಜಪೇಟೆ ಪೋಸ್ಟ್, ದ. ಕೊಡಗು ತಾಲೂಕು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
× 5	ನಂಜ, ಹರಿಜನ	.... ಬಿಳುಗುಂದ ಗ್ರಾಮ, ಅಮ್ಮತ್ತಿ ಪೋಸ್ಟ್ ದ. ಕೊಡಗು ತಾಲೂಕು	....	ಹುಂಜ (ಪ್ರತ್ಯೇಕ)
6	ಉತ್ತಯ್ಯ ಹಿ. ಸಿ.	... ಚಿಕ್ಕಪೇಟೆ ವೀರಾಜಪೇಟೆ, ದ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ)
		ಅಮ್ಮತ್ತಿ ಚುನಾವಣಾ ಕ್ಷೇತ್ರ		
1	ಚೆಳ್ಳಪ್ಪ, ಪಿ. ಐ.	.... ಗಾಂಧಿ ಭವನ, ಮಡಿಕೇರಿ, ಉ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ)
2	ನಂಜುಂಡ, ಮಾಚಿಮಂಡ	.... ಕೈಕೇರಿ ಗ್ರಾಮ, ಗೋಣಿಕೊಪ್ಪಲ್ ಪೋಸ್ಟ್, ದ. ಕೊಡಗು ತಾಲೂಕು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
		ಸಿದ್ದಾಪುರ ಚುನಾವಣಾ ಕ್ಷೇತ್ರ		
1	ಕುಟ್ಟಪ್ಪ, ಜಿ. ಎಸ್.	.... ಗಣಪತಿ ಬೀದಿ, ವಾರ್ಡ್ ನಂ. 6 ಮನೆ ನಂ. 20, ಮಡಿಕೇರಿ ಉ. ಕೊಡಗು ತಾಲೂಕು	....	ಜೋಳ ಕದಿರು ಮತ್ತು ಕುಡುಗೋಲು (ಕಮ್ಯೂನಿಸ್ಟ್)
††2	ಕಾಳ, ಬೆಟ್ಟ ಕುರುಬರ	.... ಹೆಬ್ಬಾಲೆ ಗ್ರಾಮ ಪೊಕ್ಕೆಬೆಟ್ಟ ಪೋಸ್ಟ್, ದ. ಕೊಡಗು ತಾಲೂಕು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
3	ಮುಂಡಂಡ ಮಾಚಯ್ಯ	.... ಪೊಕ್ಕೆಬೆಟ್ಟ ಪೋಸ್ಟ್ ದ. ಕೊಡಗು ತಾಲೂಕು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
††4	ಮೂರ ಎಂವರ	.... ಪೇಸ್ಟ್ರಿ, ಲಕ್ಷ್ಮಿ ತೋಟ ಪೊಕ್ಕೆಬೆಟ್ಟ ದ. ಕೊಡಗು ತಾಲೂಕು	....	ಹುಂಜ (ಪ್ರತ್ಯೇಕ)
5	ಪೂನಯ್ಯ, ಕೂತಂಡ	... ಪ್ಲಾಂಟರ್, ಲಕ್ಷ್ಮಿ ತೋಟ, ಪೊಕ್ಕೆಬೆಟ್ಟ ದ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ)
		ನಾಪೋಕ್ಲು ಚುನಾವಣಾ ಕ್ಷೇತ್ರ		
1	ನಾರಾಯಣಮೂರ್ತಿ ಎಸ್. ಎಸ್.	.... ನರಿಯಂದಡ ಗ್ರಾಮ, ಚೆಯ್ಯಂಡಾಣೆ ಪೋಸ್ಟ್ ದ. ಕೊಡಗು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
2	ತಿಮ್ಮಯ್ಯ, ಎ. ಸಿ.	.... ಗ್ರೀನ್ ಹಿಲ್ಸ್, ವೀರಾಜಪೇಟೆ, ದ. ಕೊಡಗು ತಾಲೂಕು	....	ತಕ್ಕಡಿ (ಪ್ರತ್ಯೇಕ)
		ಭಾಗಮಂಡ್ಲ ಚುನಾವಣಾ ಕ್ಷೇತ್ರ		
1	ದೇವಯ್ಯ, ಕೋರವ	... ಹೊದ್ದೂರು ಗ್ರಾಮ, ಮೂರ್ನಾಡು ಪೋಸ್ಟ್, ಉ. ಕೊಡಗು	....	ನೊಗ ಹೇರಿದ ಎರಡು ಎತ್ತುಗಳು (ಕಾಂ)
2	ಪುಟ್ಟರಾಸಿಂಗ್, ಆರ್. ಜೆ.	.... ಅಡ್ವೋಕೇಟ್, ವೀರಾಜಪೇಟೆ, ದ. ಕೊಡಗು ತಾಲೂಕು	....	ಹುಂಜ (ಸ್ವತಂತ್ರ)
3	ಪೊನ್ನಪ್ಪ, ಪಟ್ಟಮಾಡ	.... ಬೇಂಗೂರು ಗ್ರಾಮ, ಕೊಟ್ಟೂರು ಪೋಸ್ಟ್, ಉತ್ತರ ಕೊಡಗು	....	ತಕ್ಕಡಿ (ಪ್ರತ್ಯೇಕ)

ಸೂಚನೆ.— * 1. ಮೋಟು ಕೊಡುವುದಕ್ಕಾಗಿ ಗೊತ್ತಾಗಿರತಕ್ಕ ಮತ್ತು ಪ್ರತ್ಯೇಕವಾಗಿ ತೆರೆಯಲಾದ ಪೋಲಿಂಗ್ ಸ್ಟೇಷನ್‌ಗಳಲ್ಲಿ 22-1-52 (ಕಾರೀಕು ಆಥವಾ ಕಾರೀಕು'ಗಳು) 7-30 ಗಂಟೆಯಿಂದ ಪೂರ್ವಾಹ್ನ 12-30 ಗಂಟೆ ವರೆಗೆ ಅಪರಾಹ್ನ 1 ರಿಂದ 4-30 ಗಂಟೆಯವರೆಗೆ ಮೋಟು ಕೊಡಲು ಅವಕಾಶ ಕೊಡಲಾಗುವುದು.

*** 2. ಉಮೇದುವಾರರುಗಳ ಪಟ್ಟಿಯಲ್ಲಿ ಹೆಸರುಗಳಿಗೆ † ಗುರುತು ಹಾಕಿರುವ ಉಮೇದ್ವಾರರುಗಳು "ಷೆಡ್ಯೂಲ್ಡ್" (Scheduled Castes) ಸೇರಿದವರು ಮತ್ತು + ಗುರುತು ಹಾಕಿರುವ ಉಮೇದುವಾರರುಗಳು "ಷೆಡ್ಯೂಲ್ಡ್" ಪಂಗಡಗಳಿಗೆ Scheduled Tribes) ಸೇರಿದವರು.

ಸ್ಥಳ ದಕ್ಷಿಣ ಕೊಡಗು ತಾಲೂಕು
ತಾರೀಕು 11-12-51

ಪಿ. ಬಿ. ಅಚ್ಚಯ್ಯ,
ರಿಟರ್ನಿಂಗ್ ಆಫೀಸರ್

ಕೊ ಡ ಗು

ತಾ. ೨೧-೧೨-೧೯೫೧ನೇ ಶುಕ್ರವಾರ

ಚುನಾವಣೆಯೂ ಸಾರ್ವಜನಿಕ ಸಭೆಗಳೂ.

ಚುನಾವಣೆ ಹತ್ತಿರ ಬಂದಂತೆ ಪ್ರಚಾರ ಕಾರ್ಯಗಳು ಬಹು ಬಿರುಸಿನಿಂದ ಪಡೆಯುತ್ತಿವೆ. ಕೊಡಗಿನ ಚುನಾವಣಾರಂಗ ಸ್ಥಳದಲ್ಲಿ ಎರಡು ಪ್ರಧಾನ ಪಕ್ಷಗಳು ತಮ್ಮ ತಮ್ಮ ಪ್ರಚಾರ ನಡೆಸುತ್ತಿವೆ. ಒಂದು ಪಕ್ಷದ ದಾದವನ್ನು ಮತ್ತೊಂದು ಪಕ್ಷವು ಅಲ್ಲಗಳೆದು ತಾನೇ ಸತ್ಯಪಥದಲ್ಲಿ ನಡೆಯುತ್ತಿರುವುದಾಗಿ ಹೇಳಿಕೊಳ್ಳುವದರಿಂದ ಮತದಾರರಿಗೆ ಯಾವ ಪಕ್ಷದ ವಾದದಲ್ಲಿ ತಿರುಳಿದೆ ಎಂಬುದನ್ನು ಅರಿತುಕೊಳ್ಳುವದೂ ಕಷ್ಟಸಾಧ್ಯವಾಗಿದೆ. ಎರಡೂ ಪಕ್ಷಗಳ ಕಥೆ, ಚರಿತ್ರೆಗಳನ್ನು ಕೇಳಿ ಓಟರರಿಗೆ ಸಾಕಾಗಿದೆ. ಆದ್ದರಿಂದ ಓಟರರು ಎರಡೂ ಪಕ್ಷದವರನ್ನು ಒಂದೇ ಸಭೆಯಲ್ಲಿ ಸೇರಿಸಿ ಅವರ ಅಭಿಪ್ರಾಯವನ್ನು ಹಲವೆಡೆ ಕೇಳಿದ್ದಾರೆ. ವಿಚಾರಗಳನ್ನು ತಿಳಿದುಕೊಳ್ಳಲು ಮತದಾರರು ಮಾಡುವ ಈ ಪ್ರಯತ್ನವು ಸ್ತುತ್ಯವಾದುದಾದರೂ ಈ ಪ್ರಯತ್ನದಿಂದ ಮತದಾರನಿಗೆ ಪ್ರಯೋಜನವಾಗಲಿಲ್ಲ. ಏಕೆಂದರೆ ರಾಜಕೀಯ ರಂಗದಲ್ಲಿ ಇಂದು ಚುನಾವಣೆಯ ಕಾರಣಕ್ಕಾಗಿ ಕಲಸಕ್ಕಿಳಿದವರೆಲ್ಲರೂ ರಾಜಕೀಯ ಜೋಪಟಿಗಳಲ್ಲ. ಯಾವುದು ರಾಜಕೀಯ, ಯಾವುದು ಪಕ್ಷಿದೂಷಣೆ, ಯಾವುದು ಮತದಾರನ ಜಾಗೃತಿಗೆ ಅವಶ್ಯವಾದುದು ಎಂಬುದನ್ನು ತಿಳಿದವರಲ್ಲ. ಜಯದ ದೃಷ್ಟಿಯೊಂದನ್ನಿಟ್ಟು ಯಾವ ಹಾದಿ ಎಂಬುದರ ಗೋಷ್ಠಿ ಇಲ್ಲದೆ ಹತ್ತಿರದ ಪಥವೇ ಜೋಗ್ಯಪಥವೆಂಬ ವರ್ತಿಸುತ್ತಿರುವದ್ದರಿಂದ ಕೊಡಗಿನ ರಾಜಕೀಯದಲ್ಲಿ ಕೆಸರೂ, ಹೊಲಸೂ, ಹೆಚ್ಚುತ್ತಿದೆ.

ರಾಜಕೀಯ ಪಕ್ಷಗಳು ತಮ್ಮ ತಮ್ಮ ತತ್ವಪ್ರಣಾಳಿಕೆಗಳನ್ನು ಜನತೆಯ ಮುಂದಿಡುವದನ್ನು ಬಿಟ್ಟು ವ್ಯಕ್ತಿದೂಷಣೆಗಿಳಿಯುವದೇ ಗೊಂದಲಕ್ಕೆ ಕಾರಣವಾಗುತ್ತಿದೆ. ಎರಡೂ ಪಕ್ಷದವರು ಸೇರಿದ ಹಲವು ವಿಂಟಿಂಗುಗಳಿಗೆ ನಾವೂ ಹೋದ ದ್ದಿಕೆ ಅದಕ್ಕೆ ಒಂದಿಲ್ಲೊಂದು ಕಾರಣ ದಿಂದ ಈ ವಿಂಟಿಂಗುಗಳು ಗೊಂದಲದಲ್ಲಿಯೇ ಮುಕ್ತಾಯಗೊಂಡಿವೆ. ಅಪರಿಪಕ್ವವಾಗಿ ಹೇಳಬೇಕಾದರೆ ಕೊಡಗಿನ ರಾಜಕೀಯ ಧುರೀಣರಲ್ಲಿ ರಾಜಕೀಯ ಜ್ಞಾನ ಹಾಗೂ ಸಭ್ಯತೆ ಇರಬೇಕಾದಷ್ಟು ಇಲ್ಲವಿರುವದೂ ತೋರಿಬರುತ್ತಿದೆ. ಇಲ್ಲದಿದ್ದರೆ ರಾಜಕೀಯ ಸಭೆಗಳಲ್ಲಿ ವ್ಯಕ್ತಿದೂಷಣೆಗಾಗಲೀ, ಛೇಷ್ಟಣೆಗಾಗಲೀ ಎಡೆ ಎಲ್ಲಿದೆ?

ಮತದಾರರೇನೋ ವಿಚಾರಗಳನ್ನು ತಿಳಿದುಕೊಳ್ಳುವ ತಾತ್ಪರತೆಯಿಂದ ಎರಡೂ ಪಕ್ಷದವರನ್ನು ಆಹ್ವಾನಿಸಿದರೆ ಅವರಿಗೆ ದೊರೆಯುತ್ತಿರುವ ಉಪದೇಶವು ವ್ಯಕ್ತಿದೂಷಣೆ, ಕಳ್ಳ ಪ್ರಜಾಕ್ಷ, ಅಸಹ್ಯ ಮಾತುಗಳಲ್ಲದೆ ಬೇರಿಲ್ಲ. ಇಂಥಾ ವಿಂಟಿಂಗುಗಳು ಇನ್ನೂ ನಡೆದರೆ ಹೆಚ್ಚು ಗೊಂದಲವೂ, ಅಹಿತವೂ ಆಗಬಹುದಾಗಿದೆ. ಆದ್ದರಿಂದ ರಾಜಕೀಯ ಪಕ್ಷಗಳು ಪ್ರತ್ಯೇಕ ವಿಂಟಿಂಗುಗಳನ್ನು ಮಾಡಿ ತಮ್ಮ ತತ್ವ ಸಿದ್ಧಾಂತಗಳನ್ನು ಜನತೆಯ ಮುಂದಿರಿಸಬೇಕಾದುದು ಬೇಕಿದೆ. ಇಲ್ಲದಿದ್ದರೆ ಮತದಾರನು ಕೇವಲ ರಾಜಕೀಯ ಅಪಪ್ರಚಾರಕರ ಗುದ್ದಾಟ ಛೇಷ್ಟಣೆಗಳಿಂದಲೇ ತೃಪ್ತನಾಗಬೇಕಾದೀತು.

ಆದರೆ ಮತದಾರನಿಗೆ ಇವು ಬೇಕಿಲ್ಲ. ಅವನಿಗೆ ಬೇಕಾದುದು ರಾಜಕೀಯ ಜ್ಞಾನ. ತನ್ನ ದೇಶದ ಮುಂದಿನ ಆಡಳಿತದ ವಿಚಾರ. ಈ ದೃಷ್ಟಿಯಿಂದ ಮತದಾರರನ್ನು ಜಾಗೃತಿಗೊಳಿಸಲು ರಾಜಕೀಯ ಪಕ್ಷಗಳು ಪ್ರಯತ್ನಿಸಬೇಕು. ಚುನಾವಣೆಯು ರಾಜಕೀಯ ಜ್ಞಾನ ಪ್ರಸಾರದ ಸುಸಮಯ. ಆ ಸಮಯವನ್ನು ತಮ್ಮ ಒಳಜಗಳಗಳಿಗೂ ವೈಷಮ್ಯಗಳಿಗೂ ಮುಂದಾಳುಗಳು ಉಪಯೋಗಿಸದೆ ನಿಜವಾದ ಜನಜಾಗೃತಿಯ ದೃಷ್ಟಿಯಿಂದ ಕಾರ್ಯಪ್ರವರ್ತರಾಗುವುದು ಹಿತ. ಸುಳ್ಳು, ಮೋಸ, ದೂಷಣೆ, ಅರೋಪಗಳ ದಾರಿಯು ಎಂದೂ ಹಿತಕಾರಕವಲ್ಲ.

ವರ್ತಮಾನ.

ಬೋಯಿಕೇರಿಯಲ್ಲಿರುವ ಶ್ರೀ ಟಿ. ಕೃಷ್ಣ ನೇಸ್ತ್ರಿಯವರು ಬೋಯಿಕೇರಿಯಲ್ಲಿ ಮಗ್ಗದಿಂದ ಬಟ್ಟೆ ಮಾಡುವ ಕೇಂದ್ರ ಒಂದನ್ನು ತೆರೆದಿರುವರು.

ಡಿಪ್ಯುಟೆ ರೇಂಜರ್ ಕೆಲಸಕ್ಕೆ ಕೆಮಿಸ್ಟ್ರಿ, ಬೊಟನಿ ಮತ್ತು ಜೋಲಜಿ ತೆಗೆದುಕೊಂಡು ಇಂಟರ್ ವಿಜಿಯೇಟ್ ಪಾಸಾದ ತರುಣರು ಬೇಕಾಗಿರುವರು. ಕುತೂಹಲವುಳ್ಳವರು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಲ್ಲಿ ಹೆಸರನ್ನು ರಿಜಿಸ್ಟರ್ ಮಾಡಿಸತಕ್ಕದ್ದು.

"ಹಿಂದೂ ವೈಮೂವಿಜದಳಕ್ಕೆ ಎಸ್. ಎಸ್. ಎಲ್. ಸಿ. ಪಾಸಾದ ಯುವಕರು ಬೇಕಾಗಿದ್ದಾರೆ. ಸೇರಲಿಚ್ಛಿಸುವವರು ಇದೇ ತಿಂಗಳು ಇಂದರೆ ಡಿಸೆಂಬರ್ ಅಂತ್ಯದೊಳಗೆ ಹೆಚ್ಚಿನ ವಿವರಗಳನ್ನು ಮಡಿಕೇರಿ ಡಿಸ್ಟ್ರಿಕ್ಟ್ ಎಂಪ್ಲಾಯಿಮೆಂಟ್ ಆಫೀಸಿನಿಂದ ತಿಳಿದುಕೊಳ್ಳಬಹುದು.

ಮುಂದೆ ಜಾರಿಯಲ್ಲಿ ಬರುವ ವ್ಯವಸಾಯ ಆದಾಯ ತೆರಿಗೆಯ ವಿಚಾರದಲ್ಲಿ ಜೋಫ್ ಕಮಿಷನರನ್ನು ವ್ಯವಸಾಯ ಆದಾಯ ತೆರಿಗೆಯ ಕಮಿಷನರಾಗಿಯೂ ಡಿ. ಜಡ್ಜರನ್ನು ಡಿಪ್ಯೂಟಿ ಕಮಿಷನರಾಗಿಯೂ ನೇಮಿಸಲಾಗಿದೆ.

ಉತ್ತರ ಕೊಡಗಿನಲ್ಲಿ ಚುನಾವಣೆಯು ಜನವರಿ ತಾ. ೧೮ ರಲ್ಲೂ ದ. ಕೊಡಗಿನಲ್ಲಿ ತಾರೀಖು ೨೨ ರಲ್ಲೂ ನಡೆಯುವದು. ಚುನಾವಣೆಯ ದಿನ ಬೆಳಿಗ್ಗೆ ೭-೩೦ ರಿಂದ ೧೨-೩೦ ರ ವರೆಗೂ, ಮಧ್ಯಾಹ್ನ ೧ ಗಂಟೆಯಿಂದ ೪-೩೦ ರ ವರೆಗೆ ಓಟು ಮಾಡಬಹುದೆಂದು ಸಮಯ ನಿಶ್ಚಯಿಸಲಾಗಿದೆ.

ನಿವೃತ್ತ ಇಂಜಿನಿಯರಾಗಿದ್ದ ಶ್ರೀ. ಕೊಂಗೆಟ್ಟಿರ ಪಿ. ಶಾಳಪ್ಪನವರು ತಾ. ೧೭ ರಲ್ಲಿ ಬೆಂಗಳೂರಿನಲ್ಲಿ ಶಿವಾಧೀನರಾದರು.

ಅತ್ತೂರು ಗ್ರಾಮದ ಶ್ರೀ. ಚೆಪ್ಪುಡೀರ ಟಿ. ಮುತ್ತಣ್ಣನವರು ತಾ. ೧೭ ರಲ್ಲಿ ತಮ್ಮ ೮೨ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು.

ಕೊಡಗು ಜೋಫ್ ಕಮಿಷನರವರ ಕಛೇರಿ, ಮಡಿಕೇರಿ,
ತಾ. 20ನೇ ಡಿಸೆಂಬರ್ 1951.

ಪ್ರಕಟಣೆ (ನೋಟೀಸ್).

1951ನೇ ಇಸವಿಯ ಕೊಡಗು ವ್ಯವಸಾಯ ವರಮಾನ ತೆರಿಗೆ ಆಕ್ಟಿನ (ಕೊಡಗಿನ 1951 ನೇ ಇಸವಿಯ 1ನೇ ನಂಬರು ಆಕ್ಟ್) ವೇರೆಗೆ ವ್ಯವಸಾಯ ವರಮಾನ ತೆರಿಗೆ ವಸೂಲಿ.

1951-52 ನೇ ವರ್ಷದಲ್ಲಿ ಕೊಡಬೇಕಾದ ತೆರಿಗೆಯನ್ನು ನಿರ್ಣಯಿಸುವ ಬಗ್ಗೆ ಹಿಂದಿನ ವರ್ಷದ ಒಟ್ಟು ವ್ಯವಸಾಯ ವರಮಾನದ ದಾಖಲೆ ಪಟ್ಟಿ.

1951 ಇಸವಿಯ ಕೊಡಗು ವ್ಯವಸಾಯ ವರಮಾನ ತೆರಿಗೆ ಆಕ್ಟಿನ ಮೇರೆಗೆ, ಜಾರಿ ತೆರಿಗೆ ವರ್ಷದಲ್ಲಿ ಅಂದರೆ 1951-52 ನೇ ವರ್ಷದಲ್ಲಿ, ಯಾವ ವ್ಯಕ್ತಿಯ ಹಿಂದಿನ ವರ್ಷದ ಒಟ್ಟು ವ್ಯವಸಾಯ ವರಮಾನವು 3500 ರೂಪಾಯಿಗಳಿಗೆ ವಿೂರಿತ್ತೋ ಅಂಥ ಪ್ರತಿಯೊಬ್ಬ ವ್ಯಕ್ತಿಯು ಮೇಲೂ ತೆರಿಗೆ ವಿಧಿಸಲಾಗುವುದು. ಸದರಿ ಹಿಂದಿನ ವರ್ಷದಲ್ಲಿ 3500 ರೂಪಾಯಿಗಳಿಗೆ ವಿೂರಿದ ಒಟ್ಟು ವ್ಯವಸಾಯ ವರಮಾನವಿರುವ ಪ್ರತಿಯೊಬ್ಬ ವ್ಯಕ್ತಿಯೂ ಮಡಿಕೇರಿಯಲ್ಲಿರುವ ಕೊಡಗು ವ್ಯವಸಾಯ ವರಮಾನ ತೆರಿಗೆ ಅಧಿಕಾರಿಗೆ ಈ ಬಗ್ಗೆ ವಿಧಿಸಿರುವ ನಮೂನೆಯಲ್ಲಿ (ಫಾರಂ) ಬರಾಯಿಸಿ ಈ ಬಗ್ಗೆ ವಿಧಿಸಿರುವ ತಾರೀಖಿನಲ್ಲಿ ಪರಿಶೀಲಿಸಿ, ಹಿಂದಿನ ವರ್ಷದ ಒಟ್ಟು ವ್ಯವಸಾಯ ವರಮಾನಗಳ ವಿವರಗಳನ್ನೊಳಗೊಂಡ ಒಂದು ದಾಖಲೆ ಪಟ್ಟಿಯನ್ನು ಕೊಡಬೇಕಾಗಿದೆ.

ಸದರಿ ದಾಖಲೆ ಪಟ್ಟಿಯನ್ನು ತಯಾರಿಸುವ ಪದ್ಧತಿಯನ್ನುಗಾಗಿಯೂ ಮತ್ತು ಈ ವಿಚಾರದಲ್ಲಿ ಹೆಚ್ಚಿನ ವಿವರಗಳನ್ನು ತಿಳಿದುಕೊಳ್ಳುವದಕ್ಕಾಗಲಿ ಮಡಿಕೇರಿಯಲ್ಲಿರುವ ಕೊಡಗು ವ್ಯವಸಾಯ ವರಮಾನ ತೆರಿಗೆ ಅಧಿಕಾರಿಗೆ ಅರ್ಜಿ ಬರೆಕೊಳ್ಳಬಹುದು.

ಕೆ. ವಿ. ಪೊನ್ನಪ್ಪ,
ಜೋಫ್ ಕಮಿಷನರವರ ಕಾರ್ಯದರ್ಶಿ.

ಕೊಡಗಿನ ಮತದಾರರಲ್ಲಿ ವಿನಂತಿ.

ಮುಂಬರುವ ಕೇಂದ್ರ ಜನತಾ (ಪಾರ್ಲಿಮೆಂಟ್) ಸಭೆಗೆ ಪ್ರತ್ಯೇಕ ಪಕ್ಷದ ಪರ ನಾನೊಬ್ಬ ಉಮೇದುವಾರನಾಗಿ ನಿಂತಿರುವೆನು. ಕೊಡಗನ್ನು ಪ್ರತ್ಯೇಕವಾಗಿ ಇಟ್ಟುಕೊಂಡು ಈಗ ದೊರೆತಿರುವ ಜವಾಬ್ದಾರಿ ಸರಕಾರವನ್ನು ಇಲ್ಲಿಯ ಸಮಸ್ತ ಜನರ ಹಿತಕ್ಕಾಗಿ ಜಯಪ್ರದವಾಗಿ ನಡೆಸುವ ಸಂಪೂರ್ಣ ವಿಶ್ವಾಸವಿರುವ. ನನಗೆ ಕೊಡಗಿನ ಓಟರುಗಳೆಲ್ಲರೂ ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ಜಯಶೀಲನಾಗಿ ಮಾಡಬೇಕಾಗಿ ವಿನಂತಿ. ನನ್ನ ಚುನಾವಣಾ ನಕ್ಷೆ ತಕಡಿಯೂಗಿದೆ.

ಕೆ. ಟಿ. ಉತ್ತಪ್ಪ.

ಕಂಬನಿ.

ನಮ್ಮ ಕಂಪೆನಿಯಲ್ಲಿ ೧೯೪೩ ರಿಂದಲೂ ಕಂಪೋಸಿಟರಾಗಿ ಕೆಲಸ ಮಾಡುತ್ತಿದ್ದ ಶ್ರೀ. ಕೆ. ಕೆ. ನಾಣಯ್ಯನವರು ತಾ. ೯-೧೨-೫೧ ರಲ್ಲಿ ನಿಧನರಾದರೆಂದು ತಿಳಿದು ವಿಷಾದಿಸುತ್ತೇವೆ. ತೀರಾಯುವಕರೂ, ಒಳ್ಳೇ ಕೆಲಸಗಾರರೂ, ಆಗಿದ್ದ ಇವರು ಇನ್ನೂ ಬದುಕಬೇಕಿತ್ತು. ಕೊಡಗು ಕಂಪೆನಿಯು ಮೂಲಕ ಈ ಪತ್ರಿಕೆಗೆ ಸಲ್ಲಿಸಿದ ಅವರ ಸೇವೆಯು ಸ್ಮರಣೀಯವಾದುದು. ಅಮರ ಆತ್ಮಕ್ಕೆ ಚಿರಶಾಂತಿಯನ್ನೂ, ಅವರ ಕುಟುಂಬಕ್ಕೆ ದುಃಖಸಹನಾಶಕ್ತಿಯನ್ನೂ ಭಗವಂತನು ಕೊಡಲೆಂದು ಪ್ರಾರ್ಥಿಸುವೆವು.

ವೇನೇಜರು,
ಕೊಡಗು ಕಂಪೆನಿ.

JEEP FOR SALE.

In excellent condition recently over-hauled. new parts, newhood with side curtains and new battery, two new and four old tyres. Mileage 20 per gallon. Prize Rs. 5,000/-.

Apply to-

I. C. BOPIAH.
MANAGER.
Mylemoney Estate,
Joladalu Post,
Chickamagalur.

—೦೦೦—

ಶ್ರೀ ನಿಡ್ಡಮಲೆ ಸೋಮಣ್ಣನವರಿಗೆ ಒಂದು ಸವಾಲು

ಮೊನ್ನೆ ಕಾನೂರಿನಲ್ಲಿ ನಡೆದ ವಿಂಟಿಂಗಿನಲ್ಲಿ ಶ್ರೀ ಬಿ. ಡಿ. ಗಣಪತಿಯವರು ೧೯೪೮ರಲ್ಲಿ ನೀವು ಬರೆದು ಸಹಿ ಹಾಕಿದ ಪುಸ್ತಕದಿಂದ ಆಧಾರಪೂರ್ವಕವಾಗಿ ಎತ್ತಿ ಓದಿ ನೀವು ಸಂಯೋಜಕನಾಗಿದ್ದಾಗಿ ಹೇಳಿಕೆಯೊಂಬುದನ್ನು ರುಜುಪಡಿಸಿದಾಗ ನೀವು ಅದನ್ನು ಒಪ್ಪಿ "೧೯೪೮ರಲ್ಲಿ ರಾಜಕೀಯ ವಿಚಾರಕ್ಕೆ ಮೊತ್ತ ಸಂಯೋಜಕನಾಗಿದ್ದೆನೆಂದೂ ಅನಂತರ ಈಗ ಪ್ರತ್ಯೇಕವಾದಿಯಾಗಿರುವೆನೆಂದೂ, ನಾನು ಸುಳ್ಳು ಹೇಳುವವನಲ್ಲ" ಎಂದೂ ಸ್ಪಷ್ಟವಾಗಿ ಹೇಳಿದಿರಿ. ಆದರೆ ತಾ. ೫-೧೨-೪೯ ರ 'ಜನ್ಮಭೂಮಿ' ಪತ್ರಿಕೆಯಲ್ಲಿ 'ಕೊಡಗು ವೈಮೂಸೂರನ್ನು ಸೇರಲು ಇದು ಸುಸಮಯ' ಎಂದು ನೀವು ಬರೆದ ಲೇಖನವನ್ನು ಮತ್ತೊಮ್ಮೆ ಓದುವಿರಾ? ಅದರಲ್ಲಿ ನೀವು ಬರೆದ ಮೊತ್ತಗಳಿವು "ವೈಮೂಸೂರಿಗೆ ಈಗಲೇ ಸೇರುವದು ಉತ್ತಮವೆಂದು ಸ್ಪಷ್ಟವಾಗಿ ಕೆಂದು ಬರುವದು. ವೈಮೂಸೂರಿನ ರಾಜ್ಯಾಂಗ ರಚನೆ ಇನ್ನೂ ಆಗಿಲ್ಲ. ಈಗಲೇ ಸೇರಿದರೆ ನಾವೂ ರಚನೆಯ ಕಾರ್ಯದಲ್ಲಿ ಭಾಗಿಗಳಾಗಬಹುದಲ್ಲದೆ ಸಮ್ಮ ಹಕ್ಕು ಬಾಧ್ಯತೆಗಳನ್ನು ಕಾಯ್ದುಕೊಳ್ಳಬಹುದು. ಆದ್ದರಿಂದ ಇದೀಗ ಸುಸಮಯ. ೧೯೪೮ರ ಮಾತೆ ಪ್ರತ್ಯೇಕವಾದಿಗೆ ಕೆಂದು ಪ್ರತಿಜ್ಞೆ ಮಾಡಿ ಹೇಳಿದ ನಿಮ್ಮ ಅಕ್ಕ ವಂಚನೆಗೆ ಏನು ಹೇಳಬೇಕು? ಈ ರೀತಿ ಸುಳ್ಳಿನ ಕಂತೆಗಳನ್ನ ಹೊಂಡಿಸುವ ನಿಮ್ಮ ಕೆಟಲತೆ ಮತದಾರರಾದ ನಮಗೆ ತಿಳಿಯದೆಂದು ಭಾವಿಸಿದಿರಾ? ನಿಮ್ಮ ಆತ್ಮ ರಾಜಕೀಯಕ್ಕೆ ಬೇರೆ ತಿದಶ್ಯಕ ಬೇಕೆ? ದಃಖವಾಗುತ್ತದೆ. ಈ ಸುಳ್ಳಿನ ಕಂತೆಯವರಾದ ನೀವೂ ತ್ಯಾಗಿಗಳೇ? ಗಾಂಧಿಜಿಯವರ ಹೆಸರನ್ನ ನೀವೂ ಹೇಳಬಾರದೇ? ದಯವಿಟ್ಟು ಉತ್ತರ ಕೊಡಿ.

'ಮತದಾರ'

—೦೦೦—

ಕಾಂಗ್ರೆಸ್ಸಿನವರಿಗೆ ಕೆಲವು ನೇರವಾದ ಪ್ರಶ್ನೆಗಳು

(1) ಕಾಂಗ್ರೆಸಿನ ಹೆಸರಿನಲ್ಲಿ ಚುನಾವಣೆಗೆ ನಿಂತ ನೀವು ಸಂಯೋಜನಾವಾದಿಗಳಲ್ಲವೇ?

(2) ಕೊಡಗು ಪ್ರತ್ಯೇಕ ಪ್ರಾಂತವಾಗಿ ಇರಬೇಕೆಂದು ನೀವು ಹೇಳುವಿರೆ?

(3) ಪೊನ್ನಂಪೇಟೆನಾಡಿನಲ್ಲಿ ನಿಮ್ಮ ಕೆಲವು ಉಮೇದುವಾರರು ತಾವು ಪ್ರತ್ಯೇಕವಾದಿಗಳೆಂದು ಹೇಳಿದರೆ ಉತ್ತರ ಕೊಡಗಿನಲ್ಲಿ ಕೆಲವರು ಸಂಯೋಜನಾವಾದಿಗಳೆಂದು ಹೇಳುತ್ತಿರುವಿರೇಕೆ?

(4) ಭಾಷಾವಾರು ಪ್ರಾಂತರಚನೆಗೆ ತತ್ವಬದ್ಧವಾಗಿರುವ ನೀವು ಈಗ ಪ್ರತ್ಯೇಕವಾದಿಗಳೆಂದರೆ ಅದು ಕೇವಲ ಓಟಿನ ಆಸೆಯಿಂದ ಅಲ್ಲವೇ?

(5) ಅಂದು ಕೊಡಗಿನಲ್ಲಿ ಹಣವಿಲ್ಲವೆಂದೂ ಆಡಳಿತಕ್ಕೆ ದಕ್ಷರಿಲ್ಲವೇದೂ ಆ ಕಾರಣ ಕೊಡಗು ಬೇರೆ ಪ್ರಾಂತಕ್ಕೆ ಸೇರಬೇಕೆಂದೂ ವಾದಿಸಿದ ನೀವು ಇಂದು ಕೊಡಗನ್ನು ಪ್ರತ್ಯೇಕವಿಟ್ಟು ಆಡಳಿತ ನಡೆಸಲು ಹುಮ್ಮಸ್ಸು ಚುನಾವಣೆಗೆ ನಿಂತಿದ್ದರಿ ಅಂದಿನ ನಿಮ್ಮ ವಾದದ ಅರ್ಥವೇನು? ಅಂದು ಕೊಡಗು ಪ್ರತ್ಯೇಕವಿರಲು ಇಲ್ಲದ ಯೋಗ್ಯತೆಯು ಇಂದು ಕೊಡಗಿನಲ್ಲಿ ಹೇಗೆ ಬಂತು?

(6) ಅಂದು ಕೊಡಗು ತನ್ನ ಕಾಲಲ್ಲಿ ನಿಲ್ಲಲಾರದೆಂದು ವಾದಿಸಿದ ನೀವು ಇಂದು ಕೊಡಗು ಪ್ರತ್ಯೇಕವಿರಬೇಕೆಂದು ಚುನಾವಣೆಗೆ ನಿಂತಿರುವದು ಕೇವಲ ಅಧಿಕಾರದ ಆಸೆಯಿಂದ ಅಲ್ಲವೇ?

(7) ಕಳೆದ ಅನೇಕ ವರ್ಷಗಳಿಂದ ಪ್ರತಿ ಮನೆಯು ಪೂತಾಗಿ, ಪ್ರತಿ ಜಳವಳದ ಸಾರವಾಗಿದ್ದ ಕೊಡಗಿನ ಭವಿಷ್ಯದ ಪ್ರಶ್ನೆಯು ಇಂದು ದೇಶದ ಮುಂದೆ ಇಲ್ಲವೆಂದು ನೀವು ಹೇಳುತ್ತಿರುವದು ಜನತೆಯ ಓಟು ದೊರೆಯಲಾರದೆಂಬ ಹೆದರಿಕೆಯಿಂದಲ್ಲವೇ?

(8) ಕಾಂಗ್ರೆಸಿನ ಪೈಸಿಡೆಂಟರೂ, ಕೊಡಗು ಕಾಂಗ್ರೆಸಿನವರಾದ ನೀವೂ ಇಂದು ಕೊಡಗಿನ ಭವಿಷ್ಯದ ಪ್ರಶ್ನೆ ಇಲ್ಲವೆಂದೂ ಕಣ್ಣು ಮುಚ್ಚಿಕೊಂಡಾದ್ದಾ ದೇಶದಲ್ಲಿ ಈ ಪ್ರಶ್ನೆ ಇಲ್ಲವೆಂದು ನಿಮ್ಮ ಅಭಿಪ್ರಾಯವೇ?

(9) ಭಾಷಾವಾರು ತತ್ವಕ್ಕೆ ಬದ್ಧವಾಗಿರುವ ನೀವು ಆ ತತ್ವವನ್ನು ಕೊಡಗಿನ ಮತದಾರರ ಮುಂದಿಟ್ಟು ಅವರ ಹಿತಾಹಿತಗಳನ್ನು ವಿವರಿಸಿ ಮತಪಡೆಯಲು ಪ್ರಯತ್ನಿಸುತ್ತಿಲ್ಲವೇಕೆ?

(೧೦) ಕಾಂಗ್ರೆಸಿನಿಂದ ನೀವು ನಿಲ್ಲಿಸಿರುವ ಉಮೇದುವಾರರಲ್ಲಿ ಎಷ್ಟು ಜನರು ಮೂಲತಃ ತಾವು ಪ್ರತ್ಯೇಕವಾದಿಗಳೆಂದು ಪ್ರಕಟಣೆ ಕೊಟ್ಟಿರುವದರಿಂದ ಆಳಿದವರು ಸಂಯೋಜನಾವಾದಿಗಳೆಂದು ಅರ್ಥವಾಗುವುದಿಲ್ಲವೆ?

(೧೧) ದೇಶದ ಉದ್ದಗಲಕ್ಕೂ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳಲು ನಡೆಸಿದ ಹೋರಾಟಗಳು, ಪೂಜೆಗಳಲ್ಲೂ, ಜೆಲ್ಲಿಗೆ ಕಳುಹಿಸಿದ ಕಂತಿ ವಾರ್ತೆಗಳಲ್ಲೂ ಇಂದು ಕಾಂಗ್ರೆಸ್ಸಿಗರೆನ್ನುವ ನೀವು ಯಾರು ಭಾಗವಹಿಸಿದ್ದೀರಿ? ಕೊಡಗು ಪ್ರತ್ಯೇಕವಿರಬೇಕೆಂದು ಎಲ್ಲಿ ವಿಚಾರಿಸಿದ್ದೀರಿ?

(೧೨) ೧೯೫೦ ನೇ ನವಂಬರಿನಲ್ಲಿ ಕೊಡಗು ಮೈಸೂರಿಗೆ ಸೇರಿ ಹೋಯಿತೆಂದು ಅಪಪ್ರಚಾರವಾದಾಗ ಟೀ ಪಾರ್ಟಿ ಪಡೆಸಿದವರು ನಿಮ್ಮ ಗುಂಪಿನಲ್ಲಿ ಇಂದು ಇಲ್ಲವೇ?

(೧೩) ನೀವೇ ನೇರವಾಗಿ ಅಲ್ಲದಿದ್ದರೂ ಏಜಂಟರು ಮೂಲಕ ನಿಮ್ಮ ಉಮೇದುವಾರರಿಗೆ ಸೋಲು ನಿಶ್ಚಯವೆಂದೂ ಕಂಡು ಬಂದ ಕ್ಷೇತ್ರಗಳಲ್ಲಿ ಮೂರನೇ ಪಕ್ಷದವರನ್ನು ಹಿಂತೆಗೆಸಲು ದುಡ್ಡಿನ ಆಶೆಯನ್ನು ತೋರಿಸಿ ಜಯಶೀಲರಾಗಿರುವಿರೆಂದು ಹೆಚ್ಚಿರುವ ವರ್ತಮಾನ ನಿಜವೇ?

(೧೪) ಕಾಂಗ್ರೆಸ್ಸಿಗರಾಗಿ ಬಡಮುತ್ತ ದಾರರಿಗೆ ರಾಜಕೀಯ ಜಾಗೃತಿಯನ್ನೂ, ಅತನ ಹಕ್ಕು ಬಾಧ್ಯತೆಗಳನ್ನೂ ತಿಳಿಸಿ ಹೇಳಲು ನೀವು ಮಾಡಿದ ವಿಧಾಯಕವಾದ ಪ್ರಚಾರವೇನು?

(೧೫) ಕಾಂಗ್ರೆಸು ನಿಜವಾಗಿಯೂ ಜನ ಸೇವೆ ಮಾಡುವ ಸಂಸ್ಥೆಯಾಗಿದ್ದರೆ ರಾತ್ರಾರಾತ್ರಿ ಕಾರು ಜೀವುಗಳಲ್ಲಿ ಗ್ರಾಮದ ಮುಖ್ಯಸ್ಥರ ಮನೆ ಮನೆ ತಿರುಗಿ ಕಾಡಿ, ಬೇಡಿ, ಒತ್ತಾಯಪಡಿಸುವ ಅವಶ್ಯಕತೆ ಏನು?

(೧೬) ಮತದಾರರು ಯಾರೇ ಒಬ್ಬರು ಮಾಡಿದ ಸೇವೆ, ತ್ಯಾಗಗಳನ್ನು ಮರೆಯುವ ಕೃತಘ್ನರೆಂದು ನಿಮ್ಮ ಅಭಿಪ್ರಾಯವೇ?

(೧೭) ಶ್ರೀಗಳಾದ ಬಿದ್ದಂಡ ಕುಶಾಲಪ್ಪ, ಕೆ. ಹನುಮುರಾಜಯ್ಯ, ಚೆಕ್ಕೆರ ಮಾಚಯ್ಯ, ಜಿ. ಎಂ. ಲಿಂಗರಾಜಯ್ಯ, ಮುಕ್ಕಾಟಿರ ಕರುಂಜಯ್ಯ, ಮುಕ್ಕಾಟಿರ ಮಾಚಯ್ಯ, ಜಿ. ಎಂ. ಮುಂಜುನಾಥಯ್ಯ, ಮಾಚಿಮಂಡ ಸಂಜುಂಡ, ಚೌಡ್ಲು ಕಾಳಪ್ಪ ಮೊದಲಾದವರನ್ನು ಕಾಂಗ್ರೆಸಿನ ಉಮೇದುವಾರರಾಗಿ ಆರಿಸಲು ನೀವು ಇಟ್ಟುಕೊಂಡ ಆಳತೆಗೋಲೇನು? ನೆಹರೂರವರ ಆಶಯದಂತೆ ಇವರು ಉಮೇದುವಾರರಾಗಲು ಅರ್ಹರೆಂದು ನೀವು ನಂಬಿರುವಿರಾ?

ಈ ಪ್ರಶ್ನೆಗಳಿಗೆ ದಯವಿಟ್ಟು ಈ ಪತ್ರಿಕೆಯ ಮೂಲಕವೇ ಉತ್ತರ ಕೊಡಿ.

"ಮತದಾತ"

ಅವನೀಂದ್ರನಾಥ ಟಾಗೋರರ ನಿಧನ.

ಭಾರತೀಯ ಕಲೆಯ ಪ್ರಮುಖ ಗುರುಗಳಾಗಿದ್ದ ಡಾ. ಅವನೀಂದ್ರನಾಥ ಟಾಗೋರರು ಇತ್ತೀಚೆಗೆ ಕಲ್ಕತ್ತದಿಂದ ೭ ಮೈಲು ದೂರದಲ್ಲಿರುವ ಬೆರ್ರಿಕ್‌ಪುರ ಟ್ರಂಕ್ ರಸ್ತೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ತಮ್ಮ ಅಗಾಧ ಹಿರಿಯ ವಯಸ್ಸಿನಲ್ಲಿ ದಿವಂಗತರಾದರು. ಭಾರತೀಯ ಕಲೆಯ ಅಭಿವೃದ್ಧಿಗೆ ತುಂಬಾ ಹೆಣಗಾಡಿದ ಬಂಗಾಲಿ ಕಲಾಗಾರರಲ್ಲಿ ಇವರು ಹಿರಿಯ ಸ್ಥಾನ ಗಳಿಸಿದ್ದರು. ವಿಶ್ವಕವಿ ರವೀಂದ್ರನಾಥ ಟಾಗೋರರ ಸೋದರಳಿಯರಿವರು. ವಿಶ್ವ ಭಾರತಿಯ ಸ್ಥಾಪನೆಗಾಗಿ ವಿಶ್ವಕವಿಯವರೊಡನೆ ಜತೆಗೂಡಿ ಸೇವೆ ಸಲ್ಲಿಸಿದ ಶಿಷ್ಯಾವಂತ ಮಹನೀಯರು.

ಲಿಯೊಖರ ಕೊಲೆಯ ಕುರಿತು.

ಕಳೆದ ಆಕ್ಟೋಬರ್ ತಾ. ೧೫ ರಂದು ರಾವಲ್ಪಿಂಡಿಯಲ್ಲಿ ಭಾಷಣ ಮಾಡಿಕೆಯ ಮೇಲೆ ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯೊಖತ್ ಅಲಿಖಾನರ ಕೊಲೆ ನಡೆದ ದಿನ, ಆ ಸಭೆಗೆ ಭದ್ರತಾ ವ್ಯವಸ್ಥೆಗಾಗಿ ೫೯೪ ಮಂದಿ ಪೋಲಿಸ್ ಅಧಿಕಾರಿಗಳನ್ನು ಕಳಿಸಿಕೊಡಲಾಗಿತ್ತೆಂದೂ "ಪೆರಿಗ್ರಿನಸ್" ರವರು 'ಹಿಂದುಸ್ಥಾನ್ ಟೈಮ್ಸ್' ಪತ್ರಿಕೆಗೆ ಬರೆದಿದ ಒಂದು ವರದಿಯ ಮೇಲಿಂದ ತಿಳಿದುಬರುತ್ತದೆ. ಆ ಸಭೆಗೆ ಹಾಜರಿದ್ದ ಪೋಲಿಸ್ ಸಿಬ್ಬಂದಿಯ ವಿವರಗಳನ್ನು 'ಪೆರಿಗ್ರಿನಸ್' ಈ ರೀತಿಯಾಗಿ ಕೊಟ್ಟಿರುತ್ತಾರೆ. ಪಾಲ್ಗೊಂಡ ಮಂದಿ ಗಜೆಟೆಡ್ ಅಧಿಕಾರಿಗಳು, ೯ ಮಂದಿ ಸಬ್ ಇನ್ಸ್‌ಪೆಕ್ಟರರು, ೧೧ ಮಂದಿ ಅಸಿಸ್ಟಾಂಟ್ ಸಬ್ ಇನ್ಸ್‌ಪೆಕ್ಟರರು, ೩೦ ಮಂದಿ ಹೆಡ್ ಕಾನ್ಸ್‌ಟೇಬಲರು, ೨೪೦ ಮಂದಿ ಪೋಲಿಸ್ ಕಾನ್ಸ್‌ಟೇಬಲರು ಇವರಲ್ಲದೆ ಸಿ. ಐ. ಡಿ. ಖಾತೆಯ ಒಬ್ಬ ಸೂಪರಿಂಟೆಂಡೆಂಟರು, ಇಬ್ಬರು ಇನ್ಸ್‌ಪೆಕ್ಟರರು, ೯ ಮಂದಿ ಸಬ್‌ಇನ್ಸ್‌ಪೆಕ್ಟರ್ಸ್, ೨೧ ಹೆಡ್‌ಕಾನ್ಸ್‌ಟೇಬಲರು ಮತ್ತು ೬೫ ಮಂದಿ ಕಾನ್ಸ್‌ಟೇಬಲರು ಆಲ್ಲಿ ಭದ್ರತಾ ವ್ಯವಸ್ಥೆಗಾಗಿ ಕಳಿಸಲ್ಪಟ್ಟಿದ್ದರು. ಓರ್ವ ವ್ಯಕ್ತಿಯ ರಕ್ಷಣೆಗಾಗಿ ಅಷ್ಟು ಅಧಿಕ ಸಂಖ್ಯೆಯ ರಕ್ಷಣಾ ಸಿಬ್ಬಂದಿ ಕಳಿಸುವುದೆಂದರೆ ಆಶ್ಚರ್ಯವೇ; ಆ ಅಸ್ತ್ರ ಮುಂದಿಯಿದ್ದಲೂ ಪ್ರಧಾನರ ಪ್ರಾಣ ರಕ್ಷಿಸಲಾಗಿಲ್ಲವೆಂಬದು ಇನ್ನಷ್ಟು ಆಶ್ಚರ್ಯಕರ ಹಾಗು ತೋಚನೀಯ.

ಆಂಧ್ರ ಪ್ರಾಂತ ಈಗಿಲ್ಲ.

ಆಂಧ್ರ ಪ್ರಾಂತ ರಚನೆಗಾಗಿ ಮಹಾ ಚುನಾವಣೆಗಳು ಮುಂಗಿಯುವ ವರೆಗೂ ಆಂಧ್ರರು ತಾಳ್ಮೆ ವಹಿಸುವುದು ಅಗತ್ಯವೆಂದೂ ಆಚಾರ್ಯ ವಿನೋಬಾ ಭಾವೆಯವರು ಹಿತವುಡಿಯಿತ್ತಿದ್ದಾರೆ.

ಮದ್ರಾಸ್ ನಗರದ ಬಗ್ಗೆ ಆಂಧ್ರ ನಾಯಕರಲ್ಲೇ ಒಮ್ಮತವಿಲ್ಲದ್ದರಿಂದ ಸದ್ಯಕ್ಕೆ ತಾವೇನೂ ಮಾಡಲು ಸಾಧ್ಯವಿಲ್ಲವೆಂದೂ ಹಂಡಿತ ನೆಹರೂ ತಿಳಿಸಿರುವುದಾಗಿಯೂ ಹೀಗಿರುವಾಗ ಆಂಧ್ರರು ಒಮ್ಮತಕ್ಕೆ ಬರುವ ವರೆಗೂ ಕಾಯುವೆಕೆಂದೂ ಆಚಾರ್ಯ ವಿನೋಬಾಭಾವೆಯವರು ಸ್ವಾವಿಸೀತಾರಾಮಂಗೆ ತಿಳಿಸಿದ್ದಾರೆ.

ಪ್ರತ್ಯೇಕ ಪಕ್ಷದ ಬೆಂಬಲಕ್ಕಾಗಿ ಕಾಂಗ್ರೆಸ್ಸಿಗೆ ರಾಜೀನಾಮೆ.

ಕಾರೀಕ್ಯ ಎಂಬಲ್ಲಿ ಅಸ್ಸಾಮಿ ನಾಡಿನವರ ಸಾರ್ವಜನಿಕ ಸಭೆಯೊಂದು ಕಳೆದ ಬಾಣೆಯಲ್ಲಿ ನಾಡು ತಕ್ಕಂತಾದ ಶ್ರೀ ಕೊಲ್ಲಿರ ಮಂತ್ತಣ್ಣನವರ ಅಧ್ಯಕ್ಷತೆಯಲ್ಲಿ ನೆಡೆದು ಶ್ರೀ ಪಿ. ಐ. ಬೆಳ್ಯಪ್ಪನವರನ್ನು ತಮ್ಮ ನಾಡಿನ ಪರವಾಗಿ ಸ್ಥಳೀಯ ಶಾಸನ ಸಭೆಗೆ ಉಮೇದುವಾರರಾಗಿ ನಿಲ್ಲಲು ಕೇಳಿಕೊಂಡದ್ದಲ್ಲದೆ ಶ್ರೀ ಮಾಚಿಮಂಡ ಸಂಜುಂಡನವರು ತಮ್ಮ ಉಮೇದುವಾರಿಕೆಯನ್ನು ವಾಪಾಸು ತೆಗೆದುಕೊಳ್ಳಬೇಕೆಂದೂ ಕೇಳಿಕೊಳ್ಳಲಾಯಿತು. ಶ್ರೀ ಮಾಚಿಮಂಡ ಸಾಣಯ್ಯನವರಿಂದ ಸೂಚಿಸಲ್ಪಟ್ಟು ಶ್ರೀಜೆಪ್ಪಂಡ ಅಪ್ಪಚ್ಚನವರಿಂದ ಅನುಮೋದಿಸಲ್ಪಟ್ಟ ನಂತರ ಕೊಡಗನ್ನು ಪ್ರತ್ಯೇಕವಿಟ್ಟುಕೊಳ್ಳುವ ಉದ್ದಿಶ್ಯ ಪ್ರತ್ಯೇಕ ಪಕ್ಷದ ಉಮೇದುವಾರರಿಗೆ ಕೆಲಸ ಮಾಡಲಿಕ್ಕಾಗಿ ಅಸ್ಸಾಮಿ ನಾಡಿನ ಕಾಂಗ್ರೆಸಿಗರೆಲ್ಲರೂ ಕಾಂಗ್ರೆಸಿಗೆ ರಾಜೀನಾಮೆ ಕೊಡಬೇಕೆಂಬ ತೀರ್ಮಾನ ಪಾಸಾಯಿತು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿಸಲಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,05,500
ಕ್ಷೇಮನಿಧಿ	ರೂ.	59,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಹೆಚ್ ಯೂ ಹಾಫ್ಮನ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಕಾಪೆಯು ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ಇದಾವ ಗೂಂಡಾಗಿರಿ ?

ಲೇ:–ಶ್ರೀ ಎ. ಉತ್ತಯ್ಯ.

ಕಿರುನಾಲ್ಕುನಾಡಿನ ಅಂದಕೆ ಮುಕ್ಕೂರು, ಕಿರುಗೂರು, ಕೋಟೂರು, ಬೆಸಗೂರು, ನಲ್ಲೂರು ಮತ್ತು ಮುಗುಟಗೇರಿ ಗ್ರಾಮದ ಕೆಲವು ಜನರು ಸೇರಿ ನಾಡಿನ ಸಾರ್ವಜನಿಕ ಸಭೆಯನ್ನು ತಾ. ೧೮ ರಲ್ಲಿ ಮುಕ್ಕೂರು ದೇವಸ್ಥಾನದ ಬಳಿ ಸೇರಿಸಿದ್ದರು. ವಿಟಂಗಿಗೆ ಸೇರಲು ಕೂಟ್ಟ ನೋಟೀಸಿನಲ್ಲಿ ಈ ರೀತಿ ಬರೆಯಲಾಗಿತ್ತು. ಮುಂಬರುವ ಚುನಾವಣೆಯ ವಿಚಾರದಲ್ಲಿ ಪ್ರತ್ಯೇಕವಾದಿ ಪಕ್ಷದವರ ತತ್ವನಿಲುವುಗಳನ್ನು ಅರಿಯಲು ನಾಡಿನವರ ಸಭೆಯೆಂದೂ, ಮಧ್ಯಾಹ್ನದ ಊಟಕ್ಕಾಗಿ ನಾಡಿನವರು 'ಧಾರೆ' ತರಬೇಕೆಂದೂ ಸೂಚಿಸಲಾಗಿತ್ತು. ಈ ವಿಟಂಗಿಗೆ ಸಂಯೋಜಕ ನಾ ಪಕ್ಷದವರನ್ನಾಗಲೀ, ಕಮ್ಯೂನಿಸ್ಟರನ್ನಾಗಲೀ ಕಾಂಗ್ರೆಸಿಗರನ್ನಾಗಲೀ ಆಹ್ವಾನಿಸಿರಲಿಲ್ಲ. ಆದರೆ ಪ್ರತ್ಯೇಕವಾದಿಗಳ ಅಭಿಮತವನ್ನು ಅರಿಯಲೂ ಸೇರಿಸಿದ ಈ ವಿಟಂಗಿನಲ್ಲಿ ಶ್ರೀಗಳಾದ ನಿಡ್ಡೆಂಡಲೆ ಸೋಮಣ್ಣ, ಸಿ. ಎಂ. ಪೂಣಚ್ಚ, ಮತ್ತಿತರ ಹಲವು ಸಂಯೋಜಕವಾದಿಗಳು ಜಾಜರಿದ್ದರು. ನ್ಯಾಯಸಮರ್ಪಕವಾಗಿ ವಿಟಂಗನ್ನು ಕರೆಸಿದವರಿಂದೇ ಆ ದಿನದ ಸಭೆಗೆ ಅಧ್ಯಕ್ಷರನ್ನು ಆರಿಸುವ ಹಕ್ಕಲ್ಲದೆ ಬೇರೆಯವರಿಗಿರಲಿಲ್ಲ. ಆದರೆ ಈ ವಿಟಂಗಿಗೆ ತೊಂದರೆ ಮಾಡಬೇಕೆಂಬ ದುರುದ್ದೇಶದಿಂದಲೇ ಬಂದಿದ್ದ ಕೆಲವರು ದೇವಸ್ಥಾನದ ಪಕ್ಕದಿಂದೊಟರಾಡಿ ಶ್ರೀ. ಸಿ. ಕೆ. ಮಾದಯ್ಯನವರು ವಿಟಂಗಿನ ಅಧ್ಯಕ್ಷರಾಗಬೇಕೆಂದು ಸೂಚಿಸಿದರು. ವಿಟಂಗನ್ನು ಕರೆಸಿದವರ ಪರ ಶ್ರೀ. ಎ. ಸಿ. ಪೊನ್ನಪ್ಪ ಮುತ್ತಿರವರು ತಾವು ವಿಟಂಗನ್ನು ಕರೆಸಿದವರೆಂದೂ, ಬೇರೆ ಅಧ್ಯಕ್ಷರನ್ನು ಗೊತ್ತು ಮಾಡಿಕೊಂಡಿರುವೆವೆಂದೂ, ಇದು ಕೇವಲ ಪ್ರತ್ಯೇಕವಾದಿಗಳ ಅಭಿಪ್ರಾಯವನ್ನು ಅರಿಯುವ ವಿಟಂಗೆಂದೂ ಒಂದು ದೇವಸ್ಥಾನದ ಪ್ರೆಸಿಡೆಂಟರನ್ನು ರಾಜಕೀಯ ವಿಟಂಗಿನ ಅಧ್ಯಕ್ಷರಾಗಿ ಮಾಡುವದು ನಿಯಮಕ್ಕೆ ವಿರುದ್ಧವೆಂದೂ ಸೂಚಿಸಿದರು. ಕೇವಲ ತಂಟೆ ಮಾಡಲು ಬಂದಿದ್ದ ಕೆಲವರು ಇಲ್ಲದ ತಕರಾರನ್ನು ಮುಂದೆ ತಂದು ಬೆಳಿಗ್ಗೆ ೧೦ ಗಂಟೆಗೆಂದು ನಿಶ್ಚಯಿಸಿದ್ದ ವಿಟಂಗು ಮಧ್ಯಾಹ್ನ ೨–೩೦ರ ವರೆಗೂ ನಡೆಯುವಂತೆ ಆತಂಕಪಡಿಸಿದರು. ಸಭೆಯಲ್ಲಿ ಹಾಜರಿದ್ದ ಉಮೇದುವಾರರೊಬ್ಬರಾದ ಶ್ರೀ. ಸಾಣಮ್ಮಯ್ಯನವರು ವಿಟಂಗಿಗೆ ವಿರೋಧವೂಡುವವರ ಪಕ್ಷವಹಿಸಿ ವಾದಿಸಿ ಗಲಭೆಗೆ ಕಳೆಕೊಡುತ್ತಿದ್ದರು. ಇವರ ಈ ಗಲಾಟೆಗೆ ಬೆಂಬಲವೀಯುತ್ತಾ ಶ್ರೀ. ಸಿ. ಎಂ. ಪೂಣಚ್ಚ, ಎನ್. ಸೋಮಣ್ಣ, ಶ್ರೀ. ಕೆ. ಸಿ. ಕರುಂಬಯ್ಯ ಮೊದಲಾದವರು ತಲೆದೂಗುತ್ತಿದ್ದರು. ಇವರ ಈ ಮೌನಬೆಂಬಲದ ಕಾರಣವೇ ಗಲಭೆ ನಿಲ್ಲದೆ ೨–೩೦ ಗಂಟೆಯವರೆಗೆ ಸಾಗಿತು.

ವಿಟಂಗಿಗೆ ನಾಡಿನವರು ಅನೇಕರು ತಮ್ಮ ಕುಯಿಲು ಕೆಲಸವನ್ನು ಬಿಟ್ಟು ಬಂದಿದ್ದರು. ಈ ಗಲಾಟೆಯಿಂದಾಗಿ ವಿಟಂಗು ನಡೆಯುವ ಸಂದರ್ಭ ಕಾಣದಂತಿತ್ತು. ಕಡೆಗೆ ವಿಟಂಗನ್ನು ಕರೆಸಿದವರು ತಾವು ವಿಟಂಗನ್ನು ನಡೆಸುವ ನಿರ್ಧಾರ ಮಾಡಿ ಶ್ರೀ ಸಿ. ಕೆ. ಸುಬ್ಬಯ್ಯನವರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸುತ್ತಾ ಇವು ಪ್ರತ್ಯೇಕವಾದಿ ಪಕ್ಷದವರ ಅಭಿಮತ ತಿಳಿಯಲು ನಾಡಿನವರ ವಿಟಂಗೆಂದೂ, ಆಹ್ವಾನವಿಲ್ಲದೆ ವಿಟಂಗಿಗೆ ಬಂದವರು ಗಲಾಟೆ ಮಾಡದೆ ಇರಬೇಕೆಂದೂ ಇಲ್ಲದಿದ್ದರೆ ಹಿಂತೆರಳಿ ಬಹುದೆಂದೂ ಹೇಳಿದರು. ಅಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸಿ ಪ್ರತ್ಯೇಕವಾದಿ ಪಕ್ಷದ ಧ್ಯೇಯವನ್ನು ವಿವರಿಸಲು ಶ್ರೀ ಪಳಂಗಂಡ ನಂಜಪ್ಪನವರು ಮೊತಾಡಲು ಪ್ರಾರಂಭಿಸಿದಾಗ ಗಲಭೆ ನಡೆಸಲೂ ಟೊಂಕ ಕಟ್ಟಿ ಬಂದವರೂ ಅದೇ ಸಭೆಯಲ್ಲಿ ಶ್ರೀ ಮೂದಯ್ಯನವರನ್ನು ಅಧ್ಯಕ್ಷರಾಗಿ ಆರಿಸಿ ಶ್ರೀ. ಪಿ. ಎ. ನಂಜುಮಮ್ಮಯ್ಯನವರೂ ಭಾಷಣ ಮಾಡತೊಡಗಿದರು. ಈ ರೀತಿ ನ್ಯಾಯಬದ್ಧವಾಗಿ ಕರೆಸಿದ ವಿಟಂಗಿಗೆ ಸಂಯೋಜನಾ ಪಕ್ಷದಲ್ಲಿ ಕೆಲಸ ಮಾಡುತ್ತಿರುವ ಕೆಲವು ಗೂಂಡಾಗಳು ಅತಂಕ ತಂದು ವಿಟಂಗು ಶಾಂತರೀತಿಯಲ್ಲಿ ನಡೆಯದಂತೆ ತೊಂದರೆ ಪಡಿಸಿದ ಕಾರಣ ಅಧ್ಯಕ್ಷರಾದ ಶ್ರೀ. ಸಿ. ಕೆ. ಸುಬ್ಬಯ್ಯನವರು, ಪೋಲೀಸರನ್ನು ಆಹ್ವಾನಿಸಿ ಚುನಾವಣಾ ನಿಯಮದ ಸೆಕ್ಷನ್ ೧೩೭ ರಂತೆ ಗಲಾಟೆ ನಡೆಸುವವರ ಪತ್ತೆ ಬರಕೊಂಡು ಕ್ರಮ ಜರಗಿಸಬೇಕೆಂದು ಸೂಚಿಸಿ ನಾಡಿನವರ ವಿಟಂಗು ಸೇರಿ ಹೊಡೆದಾಟಕ್ಕೆ ಅವಕಾಶವಾಗಬಾರದೆಂದು ವಿಟಂಗನ್ನು ಬರಕಾಸ್ತು ಮಾಡಿದರು. ಈ ರೀತಿಯಲ್ಲಿ ನ್ಯಾಯಬದ್ಧ ನೋಟೀಸು ಕೊಟ್ಟು ಕರೆಸಿದ ಒಂದು ವಿಟಂಗನ್ನು ಗಲಾಟೆ ಎಬ್ಬಿಸಿ ನಡೆಯದಂತೆ ಮಾಡಿ ಅಧ್ಯಕ್ಷರು ವಿಟಂಗು ಬರಕಾಸ್ತು ಮಾಡಿದ ನಂತರ ಬೇರೆಡೆ ಶ್ರೀಗಳಾದ ಕೆ. ಸಿ. ಕರುಂಬಯ್ಯ, ಎನ್. ಸೋಮಣ್ಣ, ಸಿ. ಎಂ. ಪೂಣಚ್ಚ, ಸಾಣಮ್ಮಯ್ಯ ಮೊದಲಾದವರು ಸೇರಿ ವಿಟಂಗು ನಡೆಸಿದರಂತೆ!

ಕೊಡಗಿನ ಕಾಂಗ್ರೆಸ್ಸಿನ ಮುಖಂಡರು ಯಾವ ಕೆಳತರಗತಿಗಿಳಿದಿರುವರೆಂಬುದಕ್ಕೆ ಇದೊಂದು ನಿದರ್ಶನ. ಕಮ್ಯೂನಿಸ್ಟರು ಹೇಳುವಂತೆ 'ಕಾಂಗ್ರೆಸ್ಸು ಗೂಂಡಾಗಳ ಸಂಸ್ಥೆ' ಎಂಬ ಮಾತಿಗೆ ಇವರೆ ಕೃತಿಬೆಂಬಲ ಕೊಡುತ್ತಿದೆ! ನಾಡಿನವರಲ್ಲಿ ಪರಸ್ಪರ ಫೈರ್ಣೆ ಬಂದು ವಿಟಂಗು ಅಗಧ ಸಂದರ್ಭವಿರುವಾಗ ಬುದ್ಧಿವಂತರೂ, ಮುಂಡಿನ ದೇಶದ ಜವಾಬ್ದಾರಿಯನ್ನು ಹೊರಲು ಮುಂದೆ ಬಂದಿರುವವರೂ ಎನ್ನುವ ಶ್ರೀ. ಸೋಮಣ್ಣ, ಪೂಣಚ್ಚ, ಕರುಂಬಯ್ಯ ಮೊದಲಾದವರು ಜನರು ಗಲಾಟೆ ಮಾಡಬಾರದೆಂದೂ, ತಾವು ಈ ಗಲಭೆಗೆ ಕಾರಣರಾಗಿವೆಂದೂ, ಆದ್ದರಿಂದ ತಾವು ಆ ವಿಟಂಗಿನಲ್ಲಿ ಭಾಗವಹಿಸೆವೆಂದೂ ಹೇಳಬೇಕಿರಲಿಲ್ಲವೇ? ಬದಲು ನ್ಯಾಯಬದ್ಧವಾಗಿ ಕರೆಸಿದ ವಿಟಂಗನ್ನು ಗೂಂಡಾಗಿರಿಯಿಂದ ನಡೆಯದಂತೆ ಮಾಡಲು ಸಾಹಸಪ್ರೋತ್ಸಾಹವಿತ್ತು ಪ್ರತ್ಯೇಕವಾದಿ ಪಕ್ಷದವರು ಹೊರಟುಹೋದ ನಂತರ ಪುನಹ ಇವರು ವಿಟಂಗು ನಡೆಸಿರಬೇಕಿತ್ತು! ಇದು ಕಾಂಗ್ರೆಸಿನ ನೀತಿಯೇ?

ಕೊಡಗಿನ ರಾಜಕೀಯದಲ್ಲಿ ಇಂಥಾ ಗೂಂಡಾಗಿರಿಗೆ ಎಡೆಕೊಟ್ಟರೆ ಮುಂದೆ ಅನಾಹುತವಾದೀತು. ಅದ್ದರಿಂದ ಅಧಿಕಾರಿಗಳು ಚುನಾವಣಾ ಜಾನೂನಿನಂತೆ ಈ ರಾಜಕೀಯ ಗೂಂಡಾಗಳಿಗೆ ತಕ್ಕ ಶಿಕ್ಷೆ ವಿಧಿಸುವದು ಕರ್ತವ್ಯವಾಗಿರುವದಲ್ಲದೆ, ಮುಂದಿನ ಪ್ರಚಾರಕಾರ್ಯಕ್ರಮಗಳಿಗೂ ಯೋಗ್ಯ ಅವಕಾಶ ಕಲ್ಪಿಸಿಕೊಟ್ಟಂತಾಗುವದು.

5 ನೆಯ ನಮೂನೆ.

[10 (3) ಮತ್ತು 11ನೆಯ ನಿಬಂಧನೆಗಳು]

ಕೊಡಗು ಚುನಾವಣೆ ಸ್ಥಾನದಿಂದ ಲೋಕ ಸಭೆಗೆ (House of the People) ಚುನಾವಣೆ

ಸಿಂಧುವಾಗಿರತಕ್ಕ ನಾಮನಿರ್ದೇಶಗಳ (Valid Nominations) ಪಟ್ಟಿ.

ಚುನಾವಣೆ ಉಮೇದ್ವಾರರಾಗತಕ್ಕವರ ಆಖೈರು ಪಟ್ಟಿ. Final List of Candidates for Election)

ಕ್ರಮಸಂಖ್ಯೆ ಸಂಬರು	ಉಮೇದುವಾರರ ಹೆಸರು	ಉಮೇದುವಾರರ ವಿಳಾಸ	ಉಮೇದುವಾರರಿಗೆ ಯಾವುದಾದರೂ ಸಂಕೇತದ ಗುರುತನ್ನು ಕೊಟ್ಟಿದ್ದರೆ ಆ ಗುರುತು†
1	ಶ್ರೀ ಎನ್. ಸೋಮಣ್ಣ, B. A., B. L.,	ಅಡ್ವೊಕೇಟ್, ಮಡಿಕೇರಿ.	ಅಖಿಲ ಭಾರತದ ಕಾಂಗ್ರೆಸ್ ಗುರುತು ನೊಗವೇರಿದ ಎರಡು ಎತ್ತುಗಳು.
2	ಶ್ರೀ ಕೆ. ಟಿ. ಉತ್ತಪ್ಪ, B. A.,	ಬೈಸನ್ ಫೀಲ್ಡ್ ಎಸ್ಟೇಟ್, ಸಿದ್ದಾಪುರ	ತಕ್ಕಡಿ. (ಸ್ವತಂತ್ರ)

ಸೂಚನೆ:–†† 1. ಓಟುಕೊಡುವುದಕ್ಕಾಗಿ ಗೊತ್ತಾಗಿರತಕ್ಕ ಮತ್ತು ಪ್ರತ್ಯೇಕವಾಗಿ ತಿಳಿಸಲಾದ ಪೋಲಿಂಗ್ ಸ್ಟೇಷನ್‌ಗಳಲ್ಲಿ ಉತ್ತರ ಕೊಡಗು ತಾಲೋಕಿನಲ್ಲಿ ತಾರೀಕು 18–1–1952ರಲ್ಲಿ ಪೂರ್ವಾಹ್ನ 7-30 ಗಂಟೆಯಿಂದ ಅಪರಾಹ್ನ 12-30 ಗಂಟೆಯ ವರೆಗೆ ಮತ್ತು ಅಪರಾಹ್ನ 1 ಗಂಟೆಯಿಂದ 4-30 ಗಂಟೆಯ ವರೆಗೆ—ದಕ್ಷಿಣ ಕೊಡಗು ತಾಲೋಕಿನಲ್ಲಿ ತಾರೀಕು 22–1–1952ರಲ್ಲಿ ಪೂರ್ವಾಹ್ನ 7-30 ಗಂಟೆಯಿಂದ 12-30 ಗಂಟೆಯ ವರೆಗೆ ಮತ್ತು ಅಪರಾಹ್ನ 1 ಗಂಟೆಯಿಂದ 4-30 ಗಂಟೆಯ ವರೆಗೆ ವೋಟು ಕೊಡಲು ಅವಕಾಶ ಕೊಡಲಾಗುವುದು.

ಮಡಿಕೇರಿ,
ತಾ. 11–12–51.

ಎನ್. ಸಿ. ಸುಬ್ಬಯ್ಯ,
ರಿಟರ್ನಿಂಗ್ ಆಫೀಸರ್, ಲೋಕಸಭೆ (ಪಾರ್ಲಿಮೆಂಟ್).

ನೋಟೀಸ್

ಪೊನ್ನಂಪೇಟೆನಾಡು ಕೊಟ್ಟಗೇರಿ ಗ್ರಾಮದ ಪುಸಲ್ಮಾನರ ಅವಿಭಕ್ತ ಸಾಬಿಯು ಸರ್ವರಿಗೂ ತಿಳಿಸುವುದೇನೆಂದರೆ:–

ಬಿಳೂರು ಗ್ರಾಮದ ಒಬ್ಬ ಇಬ್ರಾಹಿಂ ಸಾಬಿಯು, ನಾನು ನನ್ನ ಜಮೂಖಂಡಿ ಅನುಭೋಗದ ಭೂವಿ ಮೊಕಾಟವಾಡಲು ಕ್ರಯಕ್ಕೆ ಪಡೆಯುವವಂಗೆ ಅಟಂಕ ಪಡಿಸಿ ತಾರೀಕು ೩೦–೧೧–೫೧ರ "ಕೊಡಗು" ಪತ್ರಿಕೆಯಲ್ಲಿ ಪ್ರಕಟಿಸಿ ಮೂಡಿರುತ್ತಾರೆ. ಈ ಪ್ರಕಟನೆ ಮಾಡಿದ ಇಬ್ರಾಹಿಂ ಸಾಬಿ ಯಾನೆ ಬಾಷಾ ಸಾಬಿಯು ಈಗ್ಗೆ ೧೫ ವರ್ಷಕ್ಕೆ ಹಿಂದೆ ಅವನ ಹಿಸೆ ಆಸ್ತಿಯನ್ನು ಶುದ್ಧ ಕ್ರಯಕ್ಕೆ ವಿಕ್ರಯಿಸಿ ಸರ್ವ ಹಕ್ಕನ್ನು ಕಳಕೊಂಡ ವ್ಯಕ್ತಿ ಆಗಿರುತ್ತಾನೆ. ಈ ನನ್ನ ಆಸ್ತಿ ಮೂರಾಟಕ್ಕೆ ತಡೆಮಾಡಲು ಮೇಲ್ಕಂಡ ಇಬ್ರಾಹಿಂ ಯಾನೆ ಬಾಷಾ ಸಾಬಿಗೆ ಯಾವ ಹಕ್ಕೂ ಇಲ್ಲದ ಕಾರಣ ಇವನ ತಾ. ೩೦–೧೧–೫೧ ರ ಪ್ರಕಟನೆ ರದ್ದು ಆಗಿರತಕ್ಕದ್ದು.

M A AMEER SAHEB–
Kottageri Village–

ಕೊಡಗಿನ ಕಾಂಗ್ರೆಸ್ಸಿನಲ್ಲಿ ಏನಿದೆ?

ಲೇ:-ಸಿ ಎಂ. ಪೂಣಚ್ಚ

ಹಿಂದೂದೇಶದಲ್ಲಿ ಕಾಂಗ್ರೆಸ್ಸು, ಚುನಾವಣೆಗೆ ಸರ್ವಪ್ರದೇಶಗಳಲ್ಲೂ ನಿಂತಿದೆ. ಕಾಂಗ್ರೆಸ್ಸು ಹಿಂದೂದೇಶದ ಆಡಳಿತ ವಹಿಸಿ ನಾಲ್ಕು ವರ್ಷಗಳು ದಾಟಿದವು. ಈ ಅವಧಿಯಲ್ಲಿ ಅದು ನಡೆಸಿದ ರಾಜ್ಯಭಾರದಲ್ಲಿ ಬಡವನ ನ್ಯೆಗೆ ಹರಕು ಬಟ್ಟೆಯೂ ದೊರೆಯದಾಗಿದೆ. ಬಡವನ ಹೊಟ್ಟೆಗೆ ತತ್ತು ಅನ್ನವೂ ಗಿಟ್ಟದಾಗಿದೆ. ಹೀಗೆ ನಾಲ್ಕು ವರ್ಷಗಳ ಆಡಳಿತದಲ್ಲಿ ಕಾಂಗ್ರೆಸ್ಸು ತನ್ನ ಜನಾನುರಾಗವನ್ನು ಕಳೆದು ಕೊಂಡು ನಿರ್ನಾಮವಾಗುವ ಪರಿಸ್ಥಿತಿ ಬಂದಿತ್ತು. ಅಂಥಾ ಸಮಯದಲ್ಲಿ ಪಂಡಿತ ಜವಹರರು ಅದರ ಅಧ್ಯಕ್ಷತೆ ವಹಿಸಿ ಮೃತಪ್ರಾಯವಾಗಿದ್ದ ಕಾಂಗ್ರೆಸ್ಸು ಪುನಹ ಉಸಿರಾಡತೊಡಗಿದೆ. ಆದರೆ ಒಂದು ಸಂಸ್ಥೆಯ ಜೀವನ ಶಕ್ತಿ, ಕಾರ್ಯಕ್ಷಮತೆಗಳು ಆ ಸಂಸ್ಥೆಯೊಳಗಿನ ಸದಸ್ಯರ ಯೋಗ್ಯತೆ, ಕಾರ್ಯದಕ್ಷತೆಗಳ ಮೇಲೆ ನಿಂತಿರುವದಲ್ಲದೆ ಒಬ್ಬ ವ್ಯಕ್ತಿಯಿಂದ ಒಂದು ಸಂಸ್ಥೆಯೂ ಗಲಾರದು. ನೆಹರೂರವರು ದಕ್ಷರೂ, ಜನಹಿತದೃಷ್ಟಿಯವರೂ ಏನೂ ಪಕ್ಷಪಾತ ಇಲ್ಲದೆ ಕಾಂಗ್ರೆಸ್ಸಿಗೆ ಆ ಯೋಗ್ಯತೆ ಬಂತೆನ್ನಲಾಗಲಿಲ್ಲ. ಕಾಂಗ್ರೆಸ್ಸು ಇಂದು ನೆಹರೂರವರನ್ನು ಮುಂದಿಟ್ಟುಕೊಂಡು, ಅವರ ಹೆಸರನ್ನು ಉಪಯೋಗಿಸಿಕೊಂಡು, ಚುನಾವಣಾರಂಗಕ್ಕಿಳಿದಿದೆ. ಬಹುಶಃ ಹಲವು ಪ್ರಾಂತಗಳಲ್ಲಿ ಅದು ಜಯವನ್ನು ಪಡೆದು ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರವೇ ಬರಬಹುದು. ಹಾಗೆಂಬ ಪಕ್ಷಾಣ ಕಾಂಗ್ರೆಸ್ಸಿನ ಯೋಗ್ಯತೆ ಹೆಚ್ಚಿತೆಂದಾಗಲೀ, ಕಾಂಗ್ರೆಸಿಗರ ನೀತಿನಡತೆ ಮೂರ್ಖಾಡಾಯಿತೆಂದಾಗಲೀ ಯಾರೂ ಭಾವಿಸಕೂಡದು. ಕಾಂಗ್ರೆಸ್ಸಿನಲ್ಲಿ ಲಾಭ ಬಡಕರೂ, ಕಪ್ಪುಸಂತೆಯವರೂ, ಅಧಿಕಾರಲಾಲಸಿಗಳೂ, ಹೇಗೆ ತುಂಬಿರುವರೋ ಹಾಗೆಯೇ ಆತ್ಮವಂಚಕರೂ ತುಂಬಿದ್ದಾರೆ. ಇಲ್ಲದಿದ್ದರೆ ಪುರುಷೋತ್ತಮದಾಸ ಟಂಡನ್ನರಂಥವರು ಅಧ್ಯಕ್ಷರಾಗಿದ್ದಾಗ ಅವರ ಮೂತ್ರ ತತ್ವಗಳಂತೆ ತಲೆಯೂಗುತ್ತಿದ್ದವರು ನೆಹರೂರವರು ಅಧ್ಯಕ್ಷರಾದಾಗಲೂ, ಕಾಂಗ್ರೆಸ್ಸಿನಲ್ಲಿ ಉಳಿದು ನೆಹರೂರವರ ಮೂತ್ರ ತತ್ವಗಳಂತೆ ತಲೆಯೂಗುತ್ತಿರುವರೇಕೆ? ಕಾಂಗ್ರೆಸ್ ಸಂಸ್ಥೆಗೆ ಜವಾಹರರೆಂಬ ಕೀಟವನ್ನಿಟ್ಟು ಶೋಭೆಗೊಳಿಸಿದ್ದರೂ ಅದರ ಒಳಗೆ ಪರಿಪೂರ್ಣವಾಗಿ ಹುಳುಕೇ ತುಂಬಿದೆಯೆಂದು ಹೇಳಲು ಸಂಶಯಪಡಬೇಕಾಗಿಲ್ಲ.

ಈ ಹುಳುಕು ಮನಸ್ಸಿನ ಕೊಳಕು ರಾಜಕೀಯದ ಕಾಂಗ್ರೆಸ್ಸಿಗರು ಚುನಾವಣಾರಂಗಕ್ಕೆ ಕಾಲಿಕ್ಕಿ ಅಲ್ಲಿಯೂ ಹೇಳಲು ಸಾಧ್ಯವಾದ ಹೇಸಿಗೆಯನ್ನು ಮಾಡುತ್ತಿದ್ದಾರೆ. ತಾವು ಕೋರುವಂಥಾ ತತ್ವವಾದಿಗಳಾದರೂ ಕಾಂಗ್ರೆಸ್ಸನ್ನು ತ್ಯಾಗರೆ. ಬಡ ಜನರ ಒಡಲಿಗೆ ಹೆಡೆಯುವ ಕಪ್ಪು ಸಂತೆಯವರಾದರೂ ಕಾಂಗ್ರೆಸ್ಸನ್ನು ತ್ಯಾಗರೆ. ಗಾಂಧೀಜಿಯ ಯಾವ ತತ್ವಗಳನ್ನು ಪಾಲಿಸಬಲ್ಲವರಾದರೂ ಕಾಂಗ್ರೆಸ್ಸನ್ನು ತ್ಯಾಗರೆ. ಇಂಥಾ ಅನೀತಿಯುತರು ಅನೀತಿಯ ಕಾರ್ಯಕ್ಕೂ ಕೈಹಾಕಿ ಸರ್ವನಾಶವೂಡುತ್ತಿದ್ದಾರೆ. ಇಲ್ಲದಿದ್ದರೆ ಸಮಾಜವಾದಿ ಪಕ್ಷದ ಶ್ರೀ. ಅಶೋಕಾಮೆಹತಾರವರು ಹೇಳುವಂತೆ ಹಿಮಾಚಲ ಪ್ರದೇಶದಲ್ಲಿ ಚುನಾವಣಾ ಕಾಲಕ್ಕೆ ಕಾಂಗ್ರೆಸಿನ ವಿರೋಧಿ ಉಮೇದುವಾರರಿಗೆ ಓಟು ಹಾಕಲು ತೂತಿಲ್ಲದ ಪೆಟ್ಟಿಗೆಗಳನ್ನೂ, ಸರಿಯಾದ ಚಿಕ್ಕವಿಲ್ಲದ ಪೆಟ್ಟಿಗೆಗಳನ್ನೂ ಇಡಲಾಗುತ್ತಿತ್ತೆ? ಇಲ್ಲವೇ ಓಟರ ಪೆಟ್ಟಿಗೆಗಳನ್ನು ತಲೆಕೆಳಗಾಗಿ ಇರಿಸಿಲಾಗುತ್ತಿತ್ತೆ? ಒಟ್ಟಾರೆ ಹೇಳುವದಾದರೆ ಕಾಂಗ್ರೆಸ್ಸಿನಲ್ಲಿ ನೀತಿ ಇಲ್ಲ, ನಡೆತೆ ಇಲ್ಲ. ಗಾಂಧೀಜಿಯ ಸತ್ಯ, ಅಹಿಂಸೆಗಳು ನಿರ್ನಾಮವಾಗಿ ಕಾಂಗ್ರೆಸು ಅಧಿಕಾರ ಪ್ರಿಯರ, ಬಂಡವಾಳದಾರರ, ದಂಡ್ಡಿನ ದಳ್ಳಾಳಿಗಳ ಸಂಸ್ಥೆಯಾಗಿದೆ. ನೆಹರೂರವರು ತತ್ವನಿಷ್ಠರಾಗಿ ಪ್ರೆಸಿಡೆಂಟರಾಗಿ ಉತ್ತಮ ತತ್ವಗಳನ್ನು ಹೇಳುತ್ತಿರಬಹುದು. ಆದರೆ ಕಾಂಗ್ರೆಸಿನೊಳಗೆ ಆದನ್ನು ಪಾಲಿಸುವವರಿಲ್ಲ ನೆಹರೂರವರು ಹೇಳುತ್ತಿರುವುದೊಂದಾದರೆ ಕಾರ್ಯತಃ ನಡೆಯುವುದು ಮತ್ತೊಂದು. ಹಾಗಿಲ್ಲದಿದ್ದರೆ ರಾಜ ಮಹಾರಾಜರಿಗೆ, ಬಂಡವಾಳದಾರರಿಗೆ, ದಕ್ಷತೆ, ಘನತೆಗಳಿಲ್ಲದ ಸಾವಿರ ಸಂಖ್ಯೆಯ 'ಹೌದಪ್ಪ'ಗಳಿಗೆ ಕಾಂಗ್ರೆಸ್ಸಿನಲ್ಲಿ ಸ್ಥಳ ಹೇಗೆ ದೊರೆಯುತಿತ್ತು. ಪಂಡಿತ ನೆಹರೂರವರು ಸಾರಿ ಸಾರಿ ಹೇಳಿದರು 'ಯೋಗ್ಯತೆ ಇರುವವರನ್ನು ಆರಿಸಿರಿ, ದಕ್ಷರನ್ನು ಆರಿಸಿರಿ, ಸದ್ ಹೃದಯಿಗಳನ್ನು ಆರಿಸಿರಿ' ಎಂದು. ಆದರೆ ನಡೆದದ್ದೇನು?

ಕೊಡಗು ಕಾಂಗ್ರೆಸ್ಸು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ಕಾಂಗ್ರೆಸ್ಸಿನ ಚುನಾವಣಾ ಘೋಷಣೆಗೇ ವಿರುದ್ಧ ವರ್ತಿಸಲಾಗುತ್ತಿದೆ ಕರ್ನಾಟಕ ಏಕೀಕರಣವಾಗಬೇಕೆಂದು ಕರ್ನಾಟಕ ಕಾಂಗ್ರೆಸ್ಸು ಹೇಳುತ್ತಿದ್ದರೂ, ಕರ್ನಾಟಕ ಕಾಂಗ್ರೆಸ್ಸಿನ ಆಶ್ರಯದಲ್ಲಿರುವ ಕೊಡಗು ಕಾಂಗ್ರೆಸ್ಸು ಆ ತತ್ವವನ್ನು ಒಪ್ಪಿದರೂ ಆ ಪಕ್ಷತೆಯನ್ನು ಇಂದು ಮತದಾರರ ಮುಂದೆ ಹೇಳುತ್ತಿಲ್ಲ. ಬದಲು ಕೆಲವರು ಆತ್ಮವಂಚಕರಾಗಿ, ಕಾಂಗ್ರೆಸ್ಸಿನ ತತ್ವದ ಕೊಲೆಗಡುಕರಾಗಿ ನಾವೂ ಕೊಡಗು ಪ್ರತ್ಯೇಕವಿರಬೇಕೆನ್ನುವವರು ಎನ್ನುತ್ತಿದ್ದಾರೆ. ತಾವು ಒಪ್ಪಿದ ತತ್ವದ ಮೇಲೆ ವಿಶ್ವಾಸವಿಲ್ಲದೆ, ಅದನ್ನೇ ಜನತೆಯ ಮುಂದಿಡುವ ಧೃತಿ ಇಲ್ಲದೆ ವರ್ತಿಸುವ ಇವರ ತಂಡವನ್ನು ಯಾವ ಕಾಂಗ್ರೆಸ್ಸಿಗರೆನ್ನೋಣ!?

ಈ ಕ್ಷಿ. ಕೊಡಗಿನಲ್ಲಿ ಕಾಂಗ್ರೆಸ್ಸಿನ ಹಿನರಿನಿಂದ ನಿಂತ ಉಮೇದುವಾರರನ್ನು ಪರಿಶೀಲಿಸುವ ಶ್ರೀ. ಸಿ ಎಂ. ಪೂಣಚ್ಚ, ಕೆ. ಮಲ್ಲಪ್ಪ, ಎಸ್. ಸೋಮಣ್ಣ, ಮೊದಲಾದ ಕೆಲವರು ಉಮೇದುವಾರರೆಂಗಳು ಯೋಗ್ಯರೆನ್ನಬಹುದಾದರೂ ಅವರಿಗೆ ಜನರ ಮುಂದೆ ತಮ್ಮ ನಂಬಿಕೆಯನ್ನು ಧೈರ್ಯಕ್ಕೆ ಮಾಡುವ ಧೃತಿ ಇಲ್ಲ. ಇವರು ಸಂಯೋಜನಾವಾದಿಗಳಾದರೂ ಜನರ ಮುಂದೆ ಆದನ್ನು ಹೇಳಲಾರರು. 'ನಾವು ಸಂಯೋಜನಾವಾದಿಗಳು' ಎಂದು ಸ್ಪಷ್ಟವಾಗಿ ಓಟರರ ಮುಂದೆ ಹೇಳಬೇಕೆಂದುದಕ್ಕೆ ಹಾಗೆ ಹೇಳಿದರೆ ಚುನಾವಣೆಯಲ್ಲಿ ನಮಗೆ ಓಟು ದೊರೆಯಲಾರದು" ಎಂದು ಹೇಳಿದವರಿವರಂತೆ! ಮತ್ತೆ ಉಳಿದವರನ್ನು ನೆಹರೂರವರ ಕಾಂಗ್ರೆಸ್ ಉಮೇದುವಾರರಿಗೆ ಹಾಕಿದ ಶರತಿಗನುಗುಣವಾಗಿ ಪರಿಶೀಲಿಸಿದರೆಯೋಗ್ಯರೆಷ್ಟು? ಶ್ರೀಗಳಾದ ಬಿ. ಎಸ್ ಕುಶಾಲಪ್ಪ, ಮುಕ್ಕಾಟೀರ ಕರುಂಬಯ್ಯ, ಪಾಂ. ಡಿ. ಮೊಚಯ್ಯ, ಕೆ. ಲಿಂಗರಾಜಯ್ಯ ಇವರೆಲ್ಲ ಯಾವ ಅಳತೆ ಕೋಲಿನ ಕಾಂಗ್ರೆಸಿಗರ?

ಇಂದು ಕೊಡಗಿನ ಕಾಂಗ್ರೆಸಿನ ಪಟ್ಟಿಯಲ್ಲಿ ಬಂಡವಳದಾರರಾದ ವಿಲ್ ಒಡೆಯರು ಚುನಾವಣಾ ಫ್ಲೀತ್ರಕ್ಕೆ ಧುಮ್ಮಿಕ್ಕಿದ್ದಾರೆ. ಇವರು ಯಾವುದೋ ಕಾರಣಕ್ಕಾಗಿ ಯಾರದೋ ಸಹಾಯಕ್ಕಾಗಿ ಮುಂದೆ ಬಂದಿದ್ದರೂ ಅವರ ಕೈಯ ತಿಂಡಿತುಣುಕುಗಳಿಗಾಗಿ ಅನೇಕರು 'ಸೇವೆ'ಗಿಳಿದಿದ್ದಾರೆ. ಕಂಠಬಿರಿಯುವಂತೆ ಕೂಗುತ್ತಿದ್ದಾರೆ.

ಹಳ್ಳಿಯ ಜನರಿಗೆ ಕಾಂಗ್ರೆಸೆಂಬ ಪ್ರೀತಿ ಇನ್ನೂ ಇದೆ. ಏಕೆಂದರೆ ಕಾಂಗ್ರೆಸ್ಸು ಮಹಾತ್ಮರ ಕಾಂಗ್ರೆಸ್ಸು. ಹಿಂದೂದೇಶಕ್ಕೆ ಸ್ವಾತಂತ್ರ್ಯವನ್ನು ತಂದ ಕಾಂಗ್ರೆಸ್ಸು. ಮಹಾತ್ಮರ ಕಾಂಗ್ರೆಸನ್ನು ನೆನೆದು ಗ್ರಾಮದ ಮತದಾರರೆಲ್ಲರು ಇಂದೂ ಕೆಲವೆಡೆ ಕಾಂಗ್ರೆಸಿಗೆ ಓಟು ಕೊಡಬೇಕಿನ್ನತ್ತಿದ್ದಾರೆ ಆದರೆ ಇಂದು ಚುನಾವಣಾರಂಗಕ್ಕಿಳಿದಿರುವ ಕಾಂಗ್ರೆಸ್ಸು ಹಿಂದಿನ ಗಾಂಧಿ ಕಾಂಗ್ರೆಸ್ಸಲ್ಲ. ಇಂದಿನ ಕಾಂಗ್ರೆಸ್ಸಿನಲ್ಲಿ ಗ್ರಾಮ ಆಡಳಿತ ಕ್ರಮಕ್ಕೆ ಎಡೆ ಇಲ್ಲ. ಪಾನನಿರೋಧದ ಮಾತಿಲ್ಲ. ಖಾದಿ ತತ್ವದ ಪರಿವೆ ಇಲ್ಲ. ಚರಖಾ ನೂಲುಗಳ ವಿಚಾರವಿಲ್ಲ. ಇಂದಿನದು ವಿಧಾಯಕ ಕಾರ್ಯಕ್ರಮದ ಕಾಂಗ್ರೆಸ್ಸಲ್ಲ; ಬದಲು ಅಧಿಕಾರ ರಾಜಕೀಯದ ಕಾಂಗ್ರೆಸ್ಸು. ಆದ್ದರಿಂದ ಮತದಾರರು ಪರಿಶೀಲಿಸಬೇಕು. ಕಾಂಗ್ರೆಸ್ಸು ಹಿಂದಿನಂತೆ ಬಡ ಜನರ ಸಂಸ್ಥೆಯೂ ಗಿ ಉಳಿದಿಲ್ಲ. ಅಧಿಕಾರ ಚಲಾಯಿಸಿದೆ ಮಂತ್ರಿಗಳ, ಬಿರ್ಲಾ, ಬಾಲ್ಚಿಯಾ ತಂಥಾ ಬಂಡವಳದಾರರ, ರಾಜಮಹಾರಾಜರ, ಕಪ್ಪುಸಂತೆಯ ನಿಪುಣರ, ಅಧಿಕಾರ ಪ್ರಿಯ ಚತುರರ ಸಂಸ್ಥೆ. ಕೊಡಗಿನಲ್ಲೂ ಈ ಘನತೆ ಆದಕ್ಕಿದೆ. ಇವುಗಳೆಲ್ಲಕ್ಕೂ ಕಳಸಪ್ರಾಯವಾಗಿ ಅದು ಕೊಡಗನ್ನು ಬೇರೆ ಪ್ರಾಂತಕೊಡನೆ ಸಂಯೋಜನೆ ಮಾಡಲು ಕಂಕಣಬದ್ಧವಾಗಿ ನಿಂತಿದೆ. ಆದ್ದರಿಂದ ಮತದಾರರೇ ಎಚ್ಚರಿಕೆ! ಎಚ್ಚರಿಕೆ!!

ವೀರಾಜಪೇಟೆ.
ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,

ಶ್ರೀ ಕೆ. ಯಂ. ಮೊಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ನಾಪೋಕ್ಲಿಗೆ
'ಕೊಡಗು' ಪತ್ರಿಕೆಯ ಏಜೆಂಟರು
ಶ್ರೀ ಚೋಕಿರ ಮೊಣ್ಣಪ್ಪನವರು.

ಶ್ರೀ ಪಿ. ಪೀತಾಂಬರರವರು,
" ಕೊಡಗು " ಏಜೆಂಟರು,
ಕೊಡ್ಲಿಪೇಟೆ.

ಕೊಡಗು ಪ್ರಾಂತೀಕೆ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಕೋವಿಗಳು, ವ್ಯವಸಾಯದ ಹತಾರುಗಳು ಮತ್ತು ಕಬ್ಬಿಣದ ಸಲಾಕೆ ವಗೈರೆಗಳು ಹೊರೆಯುತ್ತವೆ.

1. 32 ಪಿಸ್ತೂಲುಗಳು ಮತ್ತು ರಿವಾಲ್ವರುಗಳು.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿಗಳು.
3. 12ನೇ ನಂಬರಿನ ಜೋಡು ಹೊಳವಿನ ಕೋವಿಗಳು.
4. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
5. 2", 1", ⅝", ½", ¼" ಕಬ್ಬಿಣದ ಸಲಾಕೆಗಳು.
6. 9"×4" ಮತ್ತು 8"×4" ಕಬ್ಬಿಣದ ಬೀಮ್ಸ್ (Beams).
7. 8'×3'×12 (Gage)ನ ಕಬ್ಬಿಣದ ತಗಡುಗಳು.
8. 3"×3"×¼"ನ (Angles) ಎಂಗ್ಲ್ಸ್ ಅವಶ್ಯವಿರುವವರು ಡೆಂಟ್ ಕೊಟ್ಟಲ್ಲಿ ತರಿಸಿ ಕೊಡಬಹುದು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಅವಶ್ಯವಿರುವ ಕೋವಿಗಳಿಗೆ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರವಿ "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ
ಗೌರವ ಕಾರ್ಯದರ್ಶಿ

Edited Printed and Published by P. I. Belliappa at 'Kodagu' Press, Mercara, for 'Kodagu' Ltd.

ಕ್ಷಯ ರೋಗದ ಹಾವಳಿಯನ್ನು ನಿಲ್ಲಿಸುವ ಹೋರಾಟಕ್ಕೆ ಸೇರಿ!

ಕ್ಷಯ ರೋಗವು ಹೇಗೆ ಹರಡುತ್ತದೆಂದು ನಿಮಗೆ ಗೊತ್ತಿದೆಯೇ?

ಕ್ಷಯ ರೋಗ ತಗಲಿದವರೊಡನೆ ನೇರವಾದ ಸಂಪರ್ಕ ಮಾಡುವದರಿಂದ ಅದು ಹರಡುತ್ತದೆ. ಕ್ಷಯ ರೋಗದ ಹರಡುವಿಕೆಯನ್ನು ತಡೆಗಟ್ಟಿದರೆ ಕಾಯಿಲವು ಹಂಡದಂತೆ ಮಾಡಿದಂತಾಗುವುದು. ಕ್ಷಯ ರೋಗ ಹರಡುವುದನ್ನು ತಡೆಗಟ್ಟಿದರೆ ಅದನ್ನು ನಿವಾರಣೆ ಮಾಡಲು ಹೂಡುವ ಯುದ್ಧದ ಅರ್ಧಭಾಗದ ಜಯವನ್ನು ಗಳಿಸಿದಂತಾಗುವುದು.

ಕ್ಷಯರೋಗವನ್ನು ತಡೆಗಟ್ಟಲು ಕೈಕೊಳ್ಳಬೇಕಾದ ಸಲಕರಣೆಗಳು

೧. ಕ್ಷಯರೋಗದಿಂದ ನರಳುತ್ತಿರುವನವರನ್ನು ಪ್ರತ್ಯೇಕ ಇಟ್ಟು ಉಪಚರಿಸಲು ವಾರ್ಡುಗಳು

೨. ಗರೀಬ ಕ್ಷಯ ರೋಗಿಗಳನ್ನು ಮತ್ತು ಅವರ ಕುಟುಂಬದವರ ಎಚ್ಚರಿಕೆ ತೆಗೆದುಕೊಳ್ಳಲು ಕಮಿಟಿಗಳು

೩. ಗುಣಮುಖರಾದ ಖಾಯಿಲಸ್ಥರನ್ನು ಎಚ್ಚರಿಕೆ ತೆಗೆದುಕೊಳ್ಳಲು ಸೆಂಟರುಗಳು

೪. ಟಿ. ಬಿ. ಕ್ಲಿನಿಕ್‌ಗಳು

೫. ಕ್ಲಿನಿಕ್‌ಗಳಲ್ಲಿ, ಆಸ್ಪತ್ರೆಗಳಲ್ಲಿ, ಸ್ಯಾನಿಟೋರಿಯಮ್‌ಗಳಲ್ಲಿ ಮತ್ತು ಯಕ್ಸ್-ರೇ ಲೆಬೋರೆಟರಿಗಳಲ್ಲಿ ಹೊಸ ಮೂದರಿಯ ಸಲಕರಣೆಗಳು

೬. ಕ್ಷಯ ರೋಗವು ಹರಡದಂತೆ ತಡೆಗಟ್ಟುವ ಆರೋಗ್ಯ ಪ್ರಚಾರ

ಪುನಃ ಹುತ್ತರಿ ಹಬ್ಬವು ಬಂದಿದೆ

ಕೊಡಗಿನಲ್ಲಿ ಈಗ ಒಳ್ಳೆ ಕಾಲವಾಗಿದೆ. ಜಮೀನುಗಳಲ್ಲೆಲ್ಲಾ ಬತ್ತ, ಕಾಫಿ, ಕಿತ್ತಳೆ, ಒಳ್ಳೆಮೆಣಸು, ಯಾಲಕ್ಕಿ ಮತ್ತು ಇತರ ಫಲಗಳಿವೆ. ಅಪಾರವಾದ ಫಸಲು ಇಂದ ಸಮಯದಲ್ಲಿ ಅನೇಕ ನಿವ್ಮ ನೆಂಟರಿಷ್ಟರು ಕ್ಷಯ ರೋಗ ಪೀಡಿತರಾಗಿದ್ದಾರೆ. ಅವರಿಗೆ ಈ ಕಾಲದ ಉತ್ಸವದಲ್ಲಿ ಸಂತೋಷಪಡಲು ಆಗುವುದಿಲ್ಲ. ಮುಂದೆ ಬರುವ ಹಬ್ಬಗಳಲ್ಲಿ ಭಾಗವಹಿಸಲು ಆಗುವುದಿಲ್ಲ. ಈ ಅದೃಷ್ಟಹೀನ ಜನರಿಗೆ ತಮ್ಮ ಸಹಾನುಭೂತಿಯನ್ನು ಈಗ ತೋರಿಸಬೇಕು. ಟಿ. ಬಿ. ಸೀಲುಗಳ ಮೂರಾಟದ ಪ್ರಚಾರಕ್ಕೆ ಉದಾರವಾದ ಹೊಣೆಗಾರಿಕೆಯನ್ನು ತೋರಿಸಬೇಕು. ನೀವು ಹೆಚ್ಚಿನ ಸಂಖ್ಯೆಯಲ್ಲಿ ಟಿ. ಬಿ. ಸೀಲುಗಳನ್ನು ಕೊಂಡುಕೊಂಡರೆ ಆರೋಗ್ಯ ಅಧಿಕಾರಿಗಳಿಗೆ ಕಾರ್ಯ ಕ್ರಮಗಳನ್ನು ಕೈಗೊಳ್ಳಲು ಸಹಾಯ ಮಾಡಿದಂತಾಗುವುದು.

ಒಂದು ಆಣೆ ಬೆಲೆಯ ಟಿ. ಬಿ. ಸೀಲುಗಳನ್ನು ಕೊಂಡು ಕೊಂಡು ಕೊಡಗಿನಲ್ಲಿ ಕ್ಷಯ ರೋಗ ನಿವಾರಣೆ ಕೆಲಸದ ಅಭಿವೃದ್ಧಿಗೆ ಸಹಾಯ ಮಾಡಿರಿ.

ಟಿ. ಬಿ. ಸೀಲುಗಳು ಕೊಡಗಿನಲ್ಲಿ ಮಡಿಕೇರಿಯಲ್ಲಿರುವ ಸಿವಿಲ್ ಸರ್ಜನರಲ್ಲಿಯೂ ಮತ್ತು ಇತರ ಅಧಿಕಾರಿಗಳಲ್ಲಿಯೂ ದೊರಕುತ್ತವೆ.

ಇಂಡಿಯಾದಲ್ಲಿ ಎರಡನೆ ಸಾರಿಯ ಟಿ. ಬಿ. ಸೀಲುಗಳ ಮೂರಾಟದ ಕೆಲಸವನ್ನು ಹೊಸಡೆಲ್ಲಿಯಲ್ಲಿರುವ ಇಂಡಿಯಾದ ಕ್ಷಯರೋಗ ನಿವಾರಣಾ ಸಂಸ್ಥೆಯವರು ಪ್ರಾರಂಭಿಸಿರುವರು.

(ಈ ಪ್ರಕಟನೆಗಾಗಿ ಅಹಮದಾಬಾದಿನಲ್ಲಿರುವ ಅರೋಗ್ಯೋದಯ ನೂಲುವ ಮತ್ತು ನೆಯಿಗೆಯ ಕಂಪೆನಿ ಲಿಮಿಟೆಡ್‌ನವರು ಹಣ ಸಹಾಯ ಮಾಡಿರುವರು)